ಕೊರವಂಜಿ

ಸಂಪುಟ ೧೦ | ನವೆಂಬರ್ ೧೯೫೦ | ಸಂಚಿಕೆ ೮

ಕುಹಕಿಡಿಗಳು

ಹಾಲು, ಜೇನು, ಸಕ್ಕರೆ ಎಲ್ಲವೂ ಮಕ್ಕಳಿಗೆ ಮಾತ್ರ ಆಹಾರ. ದೊಡ್ಡವರೆಲ್ಲಾ ಗೆಡ್ಡೆ ಗೆಣಸು ಹಸಿಯಾಗಿ ತಿನ್ನಬೇಕು. (ಟಾಂಡನ್)

—ಬಾಲ್ಯ ಮರುಕಳಿಸಿದೆ ಎನ್ನುವುದಕ್ಕೆ ಬೇರೆ ನಿದರ್ಶನವೇ ಬೇಡ!

* * *

ಈ ಸಾರಿ ದೀಪಾವಳಿಗೆ ಸಕ್ಕರೆ ಸಿಕ್ಕದೆ ಇದ್ದರೂ—ಮಾತಾಪು ಪಟಾಕಿ ಸಾಕಷ್ಟು ದೊರಕಿತು. (ಭಾಷಣ)

—ಕೊರಿಯಾದಲ್ಲೂ ಹಾಗೇ ಅಂದರು.

* * *

ಅಂದಹಾಗೇ—ಬೃಂದಾವನದಲ್ಲಿ ತುಳಸೀಗಿಡ ಒಂದೂ ಬೇಡವೇ?

* * *

ವ್ಯಾಪಾರಿಗಳು ಶೇಕಡಾ ೯೦ ತೆರಿಗೆ ಕೊಡಬೇಕು. (ರಾಜಾಜಿ)

—ಸದ್ಯ! ಶ್ರೀ ದೇಶಮುಖರು ಹಿಂತಿರುಗಿದರಲ್ಲಾ!

* * *

ಅಮೇರಿಕಾದಲ್ಲಿ ಈಗ ಲೋಹದ ಅದುರುಗಳಲ್ಲಿ ಶೇಕಡಾ ೩೦ ರಷ್ಟು ಯುದ್ಧಕಾರ್ಯಕ್ಕೆ ಮೀಸಲಾಗಿಡುತ್ತಾರಂತೆ.

—ಆದರೆ ಬಾಯಿಗೆ ಬಂದಿದೆ. —"ಶಾಂತಿ ವೇದಾಂತ"

* *

ಒಂದು ಚೂರು ಕಾಗದದ ಬೆಲೆ ಕೂಡ ಏರಿದೆ. (ಪತ್ರಿಕೆ)
—ಅಲ್ಲವೇ? ಬಸ್ ಟಿಕೆಟ್ ನೋಡಿ!

* * *

ಮಹಾ ಚುನಾವಣೆಯಲ್ಲಿ ಮಹಾ ಸಭೆಯು ಸ್ಪರ್ಧಿಸುವುದು.
—ಏನು, ಮಹಾ!

* * *

ಜ|| ಮೆಕಾರ್ಥರ್ ಅವರ ಭೇಟಿಯನ್ನು ಪ್ರೆಸಿಡೆಂಟ್ ಟ್ರೂಮನ್ ಪಡೆದರಂತೆ
— ಇನ್ನು ಶ್ರೀ ಕ್ಲೆಮೆಂಟ್ ಅಟ್ಲಿ ಎಂದು ಭೇಟಿ ಪಡೆಯುತ್ತಾರೋ?

* * *

ಕಾಮನ್‌ವೆಲ್ತ್ ಕ್ರಿಕೆಟ್ ಆಟಗಾರರು ಪ್ರವಾಸ ಮುಗಿಸುವ ತನಕ ಮಹಾ ಚುನಾವಣೆಗಳು ನಡೆಯಬಾರದು ಎಂದು ಸೂಚನೆ ಬಂದಿದೆಯಂತೆ.

* * *

ವಾರಕ್ಕೊಂದು ದಿವಸ ಉಪವಾಸ ಮಾಡಬೇಕು. (ಶ್ರೀ ಮುನ್ಷಿ)
—ರೇಷನ್ ಅಂಗಡೀಲಿ ಸಾಮಾನು ತರುಕ್ಕೆ ನಮ್ಮಾಕೆ ಹೋದ ದಿನ ನಮಗೆಲ್ಲಾ ಉಪವಾಸವೇ ಆಗ್ತಿದೆಯಲ್ಲಾ!

* * *

ಅನ್ನ ಹೆಚ್ಚಾಗಿ ತಿಂದರೆ ವಾಯು ವ್ಯೆ ಬರುತ್ತೆ. —"ವೈದ್ಯ ಸಮ್ಮೇಳನ"
—ಬರಲಿರುವ ಕಷ್ಟದ ದಿನಗಳ ಹೊತ್ತಿಗೆ ಈ ಸುದ್ದಿಯನ್ನು ಆಹಾರ ಶಾಖೆಯವರು ಪ್ರಚುರಪಡಿಸಬೇಕಲ್ಲವೇ?

* * *

"ಸರ್ದಾರ್ ಪಟೇಲರು ಹೇಳಿದ ಹಾಗೆ ಅಫ್ಘಾನಿಸ್ಥಾನದವರು ಕೇಳುತ್ತಿದ್ದಾರೆ" ಎಂದು ಪಾಕಿಸ್ತಾನ ಇನ್ನೂ ಪ್ರಚಾರ ಮಾಡಿಲ್ಲವಂತೆ.

* * *

"ಲಟ್ಟಣಿಗೆ ಇಲ್ಲದೆ ಈಗಿನ ಕಾಲದಲ್ಲಿ ಸಂಸಾರ ಮಾಡೋಕೆ ಆಗುಲ್ಲ."
(ಭಾಷಣ)
—ಚಪಾತಿ ಮಾಡುವುದಕ್ಕೂ— ಗಂಡ ಮಕ್ಕಳ ಹತೋಟಿಗೂ ಲಟ್ಟಣಿಗೆ ಅತ್ಯವಶ್ಯಕ.

* * *

ಪ್ರಪಂಚ ಸಂಸ್ಥೆಯ ಸೈನ್ಯಗಳು ಕೊರಿಯಾದಿಂದ ವಿಯಟ್‌ನಾಂಗೆ ವರ್ಗಾಯಿಸಲ್ಪಡಬೇಕು ಎಂದು ಅಮೇರಿಕಾ ಇನ್ನೂ ನಿಶ್ಚಯಿಸಿಲ್ಲವಂತೆ.

* * *

ಉರಿಗಾಳು

ರೂಸ್‌ವೆಲ್ಟ್ ಹಾಕಿದ ಗೆರೆಯನ್ನು ದಾಟುವುದಿಲ್ಲ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಟ್ರೂಮನ್‌ರವರು ಮೊನ್ನೆ ೩೮ನೆ ಪ್ಯಾರಲಲ್ ಗೆರೆಯನ್ನು ದಾಟಿ ಯಶಸ್ಸುಗಳಿಸಿದರು. ಆ ಸಮಾನಾಂತರ ರೇಖೆ ಸಮಾಧಾನಾನಂತರ ರೇಖೆಯಂತೆ.

* * *

ನವ ನಗರದ ಜಮ್ ಸಾಹೇಬರು ನ್ಯೂಯಾರ್ಕ್‌ನ ೬೦ ಜನ ಪತ್ರಿಕೋದ್ಯೋಗಿಗಳಿಗೆ ತಮ್ಮ ಕಾಥೇವಾಡ ಅಡಿಗೆಯವರು ತಯಾರಿಸಿದ ಪದಾರ್ಥಗಳನ್ನು ಬಡಿಸಿದರು (ಸುದ್ದಿ) ಮುಂದಿನ ಸುದ್ದಿ ಇನ್ನೂ ಗೊತ್ತಾಗಿಲ್ಲ.

* * *

ವರಮಾನ ತೆರಿಗೆಯ ಹಾವಳಿ ಇವತ್ತು ಇಂಗ್ಲಂಡಿನಲ್ಲಿ ಎಷ್ಟೆಂದರೆ, ವರ್ಷವೊಂದಕ್ಕೆ ೧೫ ಲಕ್ಷ ರೂ ವರಮಾನ ಬರುವ ಪುಣ್ಯಾತ್ಮನಿಗೆ ಉಳಿಯುವುದು ಕೇವಲ ೯೫೩೧೦ ರೂ. ಮಾತ್ರ. (ವರದಿ) ಪರಂಗಿಯವರೇ ಮೇಲು ಎಂಬ ಜನ ಹೇಳುತ್ತಿರುವುದಕ್ಕೆ ಇದೂ ಒಂದು ನಿದರ್ಶನ.

* * *

ತಮ್ಮ ಊರಿನ ಎಂ.ಕೆ. ನಾಣಿ. ಶೀನರನ್ನು ಕಾಮನ್‌ವೆಲ್ತ್ ಕ್ರಿಕೆಟ್ ಟೀಮಿನೊಂದಿಗೆ ಬೆಂಗಳೂರು ಟೆಸ್ಟಿನಲ್ಲಿ ಆಡಿಸಲೇ ಬೇಕೆಂದೂ, ಉಳಿದ ಯಾವ ೩ ಜನ ಆಟಗಾರರಿಗಿಂತಲೂ ಚೆನ್ನಾಗಿ ಆಡಿ ಮೈಸೂರಿಗೆ ಜಯಗಳಿಸಿಕೊಡುವರೆಂದೂ ಸಂಚಾಲಕರಿಗೆ ಅನೇಕ ಕಾಗದಗಳು ಬಂದಿವೆಯಂತೆ.

* * *

ಮರಳುಗಾಡನ್ನು ಮಾನವ ನಗರಗಳನ್ನಾಗಿ ಮಾರ್ಪಡಿಸಿದೇವೆ.(ಅಮೇರಿಕ ಪತ್ರಿಕೆ) ಹಾಗೆಯೇ ಉಳಿಸಿದ್ದರೆ ಚೆನ್ನಾಗಿತ್ತಲ್ಲಾ.

* * *

ಲಂಚಾಸುರನ ವಿಗ್ರಹವೊಂದನ್ನು ಮೆರವಣಿಗೆ ಮಾಡಲು ನಾಗಪುರದಲ್ಲಿ ಏರ್ಪಾಟು ಮಾಡಲಾಗಿವೆ. (ವರದಿ) ಈ ಮರ್ಯಾದೆ ತಮಗೆ ಸಲ್ಲತಕ್ಕದ್ದೆಂದು ಅನೇಕ ಮಹನೀಯರು ಆಗಲೇ ಪೈಪೋಟಿ ಹೂಡಿರುವರಂತೆ.

* * *

ಕಿವುಡರನ್ನೂ ೩ನೇ ಮತ್ತು ೪ನೇ ಕ್ಲಾಸ್ ಸರ್ಕಾರಿ ನೌಕರಿಗಳಿಗೆ ನೇಮಿಸಿಕೊಳ್ಳಬಹುದೆಂದು ಇಂಡ್ಯಾ ಸರ್ಕಾರ ಆಜ್ಞೆ ಇತ್ತಿದೆ. (ವಾರ್ತೆ) ಅತ್ಯುನ್ನತ ಅಧಿಕಾರಿಗಳೇ ಕಿವುಡರಾಗಿರುವಾಗ, ಈ ಆಜ್ಞೆಯಿಂದ ನಮಗೆ ಆಶ್ಚರ್ಯವೇನೂ ಇಲ್ಲ.

*   *   *

ಉ. ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಕಾಡುಮೃಗಗಳ ಸಂಗ್ರಹಕ್ಕಾಗಿ ಕೆಲಸ್ಥಳಗಳನ್ನು ಕಾದಿರಿಸಲಾಗುವುದು. (ಮಂತ್ರಿಯ ಭಾಷಣ) ಸದ್ಯಃ ಅಲ್ಲಿಗೆ ನಮ್ಮ ಸ್ನೇಹಿತರನೇಕರನ್ನು ರವಾನಿಸಿ ನಾವು ನೆಮ್ಮದಿಯಿಂದಿರಬಹುದು.

*   *   *

ವಾಲ್ಮೀಕಿ ಋಷಿಗಳು ಹನುಮಂತಾದಿಗಳಿಗೆ ಬಾಲವನ್ನು ಹಚ್ಚಿ ದ್ರಾವಿಡ ಜನಾಂಗಕ್ಕೇನೆ ಅಪಮಾನ ಮಾಡಿದಾರೆ. (ಆಧುನಿಕ ಟೀಕೆ) ತಮಗೆ ಹಚ್ಚಲಿಲ್ಲವಲ್ಲಾ ಎಂಬ ಕಾರಣ ಒಂದಿರಬಹುದೆ?

*   *   *

ಹಿಂದೀ ಭಾಷೆ, ಕನ್ನಡವನ್ನು ಮೂಲೆಗೆ ತಳ್ಳುವುದೆಂಬ ಹೆದರಿಕೆಗೆ ಆಸ್ಪದವೇ ಇಲ್ಲ. (ಶ್ರೀ ಸೀತಾರಾಂ ಚತುರ್ವೇದಿ) ಏಕೆಂದರೆ, ಕನ್ನಡ ಆಗಲೇ ಮೂಲೆಯಲ್ಲಿ ಬಿದ್ದಿದೆ.

*   *   *

ವಿದ್ಯಾರ್ಥಿಗಳು ಒಳ್ಳೆ ಶೀಲವನ್ನು ಕಲಿಯಬೇಕು. (ರಾಜಾಜಿ) ಆದರೆ, ಅವರಿಗೆ ಅದನ್ನು ಕಲಿಸುವ ಅಧಿಕಾರ ಯಾರಿಗಿದೆ?

*   *   *

ಗೋವುಗಳು ರೈತನ ತಾಯಿ ತಂದೆ (ಭಾಷಣ) ಈ ಮಾತನ್ನು ನಂಬಿದವರು ಅವನು ಸಾಧುವಾದ ಪ್ರಾಣಿ, ಎಂಬುದನ್ನೂ ನಂಬಿ ಮೋಸಹೋಗುವರು.

*   *   *

ನದಿಯನ್ನು ದಾಟಿದವನು ಸಂಸಾರ ಸಾಗರವನ್ನು ದಾಟಿಯಾನೇ? (ಗ್ರಂಥ) ಆ ಸಾಗರದ ನೀರೂ ಉಪ್ಪು.

*   *   *

ಮುಂದಿನ ಜನ್ಮದಲ್ಲಿ ಹರಿಜನ ವಂಶದಲ್ಲಿ ಜನಿಸಲು ಹಿಮಾಲಯ ಸ್ವಾಮಿಗಳು ಒಬ್ಬರು ಒಂದು ಮಂತ್ರವನ್ನು ಉಪದೇಶ ಮಾಡುತ್ತಿರುವರಂತೆ.

*   *   *

ಅವಳೀ ಮನೆ ಅವಾಂತ್ರ

ನಮ್ದು ಅವಳೀ ಮನೆ. ಈ ಅವಳೀ-ಜವಳೀ ವಾಸದಲ್ಲಿ—ಭೂವಿವರಣೇಲಿ "ಈ ಬಿಸಿನೀರಿನ ಕಾಲುವೆಯಿಂದಾಗುವ ಅನುಕೂಲಗಳಾವುವು ಪ್ರತಿಕೂಲಗಳಾವುವು ವಿವರಿಸು" ಎನ್ನುವಂತೆ—ಅನುಕೂಲ್ವೂ ಇದೆ ಪ್ರತಿಕೂಲ್ವೂ ಇದೆ !

ಉದಾಹರಣೆಗೆ—ಅವರ್ಮನೇ ಬಾಗಿಲ್ತಟ್ಟಿದ್ರೆ ನಮ್ಮನೇ ಬಾಗ್ಲೂ ಅಂದ್ಕೊಂಡು ದಿನಕ್ಕರನತ್ಸಾರಿ ಓಡ್ಹೋಗೋದು. ನಮ್ಮನೇಲಿ ಇಂಗಿನ್ವಾಸ್ನೆ ಬಂದ್ರೆ ಅವರ್ಮನೇ ಆತ— ಆತನಿಗಿಂಗಾಗ್ದು—ಆಕೆ ಮೇಲೆ ಹಾರಾಡೋದು, ನಮ್ಮನೇ ಮಕ್ಕಳು ತಿಂದ ಮೋಸಂಬಿ ಸಿಪ್ಪೆ ಅವರ್ಮನೇ ಮುಂದ್ಗಡೆ. ಅವರ್ಮನೇ ಸಾಲದೋರೆಲ್ಲಾ ನಮ್ಮನೇ ಬಾಗಿಲಲ್ಲೇ, ಹೀಗೇ ಎಷ್ಟೋ ಅವಿವೇಕ, ಅವಾಂತ್ರ !

ಆದ್ರೆ ಅಷ್ಟೇ ಅನುಕೂಲ್ವೂ ಇದೆ ಅವಳೀ ವಾಸದಲ್ಲಿ. ಜವಳೀ ಮನೇಲಿ ರೇಡಿಯೋ ಇದ್ದು ಅವಳೀ ಮನೇಲಿಲ್ದೇ ಹೋದ್ರೂ ಅವಳೀ ಮನೆಯೋರು—ಅಂದ್ರೆ ನಾವು—ಅವರ್ಮನೇ ರೇಡಿಯೋ ಕಾರ್ಯಕ್ರಮಾನೆಲ್ಲಾ ಕಿವೀಗ್ಹಾಕ್ಕೊಂಡು, "ರೇಡೀಯೋಲಿ ಹೀಗ್ಹೇಳ್ದ, ಹಾಗ್ಹಾಡ್ದ" ಅಂತ ಹೇಳ್ಕೊಂಡ್ರೆ, ಕೇಳ್ದೋರೆಲ್ಲಾ ನಮ್ಮನೇಲೇ ರೇಡಿಯೋಯಿದೆ ಅಂದ್ಕೋತಾರೆ! ಹಾಗೇನೇ, ಅವಳೀ ಮನೇ ಸಂತಾನಕ್ಕೆ ಒಬ್ಬ ಮೇಷ್ಟ್ರಿಟ್ಟಿದಾರೇನ್ನಿ. ಜವಳೀ ಮನೇಲಿಲ್ಲ. ಅವಳೀ ಮನೇಗೆ ಆತ ಬಂದಾಗ ಜವಳೀ ಮನೆ ಕುಮಾರ ಕಂಠೀರವನ್ನ ನಿತ್ಯ ಎರಡ್ಮನೆ ಮಧ್ಯ ಇರೋ ಬಾಗಿಲ್ಗೆ ಕಿವೀಕೊಟ್ಟು ಕೂರಿಸ್ಬಿಟ್ರೆ, ಕಾಸು ಖರ್ಚಿಲ್ದೇ ಪಾಠಹೇಳ್ಸಿದ್ಹಾಗಾಗುತ್ತೆ. ಒಂದೊಂದ್ಸಲ ಅವಳೀ ಮನೆ ಸಂತಾನಕ್ಕಿಂತ ಜವಳೀ ಮನೇ ಚುರುಕು ಮರೀನೇ ಚೆನ್ನಾಗಿ ಪಾಠಾನ ಗ್ರಹಿಸಿರ್ತಾನೆ! .. ....

ಅಂದ್ಹಾಗೆ ಸೆನ್ಸಸ್ ಗಣತೀಲೋ, ಮಧ್ಯದ್ಬಾಗಿಲು ಚಿಲ್ಕ ತೆಕ್ಕೊಂಡ್ಬಿಟ್ಟಿದ್ರೆ ಸಾಕು, ಆ ಮನೆ ಚೆಕ್ಕಿಂಗ್‌ಗೆ ಬಂದಾಗ ಅಲ್ಲೂ ಹತ್ತು ಜನ, ಈ ಮನೇ ಚೆಕ್ಕಿಂಗ್ ಮಾಡ್ದಾಗ಼್ಲೂ ಹತ್ತು ಜನ!

ಆದ್ರೂ ಒಂದೊಂದ್ಸಾರಿ, ಈ ಅವಳೀ ಸಹವಾಸ ಪೂರಾ ಕೈಕೊಟ್ಬಿಡತ್ತೆ ! ....ಮೊನ್ನೆ, ನವಿಲ್ಕೋಸು ತುರೀತಾ ಕೂತಿದ್ದೆ ನಮ್ಮನೇಲಿ. ಪಕ್ಕದ್ಮನೆ ಆತಂಗೂ ಆಕೇಗೂ ಸಂವಾದ ನಡೀತಿತ್ತು;– ಅಲ್ಲಾ ಈ ಅವಳೀ ಜವಳೀಲಿ ಸದಾ ಸಂಸಾರ ರಟ್ಟೇ! "ಕಂಡೋರ ಮನೆ ಕಂತೆ ನನಗ್ಯಾಕೋ, ನೆರೆಮನೆ ನೀತಿ ಹಂಗು ನಿನಗ್ಯಾಕೋ ಪುರಂದರ ವಿಠಲಾ" ಅಂತ ದಾಸರೇನೋ ಹಾಡಿದಾರೆ.

ಆದ್ರೆ. ದಾಸರ ಕಾಲದಲ್ಲಿ ಈ ಮನೇ ಮುಗ್ಗಟ್ಟಿರ್ಲಿಲ್ಲ. ಅವಳೀ ಮನೆ ಅನುಭವ ಕಾಣ್ರು ಅವ್ರು ಪಾಪ! ಅವಳೀ ಜವಳೀ ಮನೇಲಿದ್ಕೊಂಡು, ನೆರೆಮನೇ ನಾಲ್ಗೆ ಕೇಳ್ದೇ ಇರೋದು ಹೇಗೆ ಅಂತೀನಿ! ಕಿವೀಗೇನು ಹತ್ತಿ ಗಿಟಕ್ಕೊಂಡು ಕಿರು ಗೋಣ್ಣೇ? ಆದರಲ್ಲೂ, ಈಗಿನ್ಕಾಲದ ಇಟ್ಟಿಗೇಹಿತ ಸಿಮೆಂಟ್ ಕಾಂಕ್ರೀಟ್ ಕಟ್ಟಡ— ಅವರ್ಮನೇಲಿ ಕೆಮ್ಮಿದ್ರೆ ನಮ್ಮನೇ ಗೋಡೆ ನಡುಗುತ್ತೆ, ನಮ್ಮನೇಲಿ ಸೀನಿದ್ರೆ ಅವರ್ಮನೇ ಬಾಗಿಲು ಬೆದರತ್ತೆ!

"ಅಲ್ವೇ, ಊರು, ಊರ ಮಗ್ಗಲ್ನಲ್ಲಿ ಪಾರ್ಕು, ಪಾರ್ಕಿನ್ಪಕ್ಕದಲ್ಲೇ ಅಲ್ವೇನೇ ರೈಲ್ವೇ ಸ್ಟೇಷನ್ನು?" ಎಂದ ಆತ.

(ಇದೇನು ಊರು, ಸ್ಟೇಷನ್ನೂಂತ ಮಾತಾಡ್ತಿದಾರೆ. ಯಾವ್ದೋ ಊರಿಗೆ ಹೊರಟರೋ ಹಾಗೆ ಕಾಣತ್ತೆ....ಮಗಳ್ಮನೇ ಮಂಡ್ಯದಲ್ಲಿ ಅಂತ ಹೇಳಿದ್ರು, ಅಲ್ಲಿಗೇ ಇರ್ಬೇಕು ಅಂದ್ಕೊಂಡೆ.)

"ಹೌದು, ಮತ್ತೆ ಇನ್ನೆಲ್ಲಿ ಅಂದ್ಕೊಂಡ್ರಿ?.......ಅಲ್ಲಾಂದ್ರೇ ಮರ್ತೇ ಬಿಡೋದೇ? ಪಕ್ಕದಲ್ಲೇ ಅಲ್ವೇ ಬೆಟ್ಟ? ರೈಲ್ವೇ ಸ್ಟೇಷನ್ನಿಂದ ಸೀದಾ ಬೆಟ್ಟಕ್ಕೇ ಹೋಗೋದು ರಸ್ತೆ!

"ಹೌದ್ಕಾಣೇ. ನಿಜವಾಗಿ ನಾನ್ಮರ್ತೇಬಿಟ್ಟಿದ್ದೆ!" (ಮಗಳ್ಮನೇಗಲ್ಲ ಹಾಗಾದ್ರೆ....ಬೆಟ್ಟಾಂತಾರೆ, ಮಂಡ್ಯದಲ್ಲಿ ಬೆಟ್ಟೆಲ್ಲಿದೆ........ಓಹೋ! ತಂಗೀ ಊರು ತಿರುಪತೀ ಹತ್ರ ಅಂದಿದ್ರು ಅವತ್ತು, ಅಲ್ಲಿಗೇ ಇರ್ಬೇಕು! ತಂಗೀನ್ನೋಡ್ಕೊಂಡು ತಿಮ್ಮಪ್ಪನ ದರ್ಶನಾನೂ ಮಾಡ್ಕೊಂಡು ಬರ್ತಾರೆ ಹಾಗೇನೆ....ಪುಣ್ಯಾತ್ಮರು! ನನ್ನ ಹಣೇಬರಹ, ಬೆಂಗ್ಳೂರಲ್ಲಿ ಬಿಟ್ಟ ಬೇರು, ಬೇರೆ ಕಡ್ಗೆ ಬಾ ಅನ್ನೋರೇ ಗತಿಯಿಲ್ಲ. ಅಂದ್ರೂ ಕರ್ಕೊಂಡು ಹೋಗೋ ಬುದ್ಧಿ ಮೊದ್ಲೇ ಇಲ್ಲ!....)

"ಲ್ರೋ ಲ್ರೋ....ತನ್ರೋ ಕಲ್ನಾ!....ಬೇಗ....ಎರಡೋ ನಾಲ್ಕೋ.... ಬೇಗ ಬರ್ಬೇಕು!...."

"ಹಾಗೇ ಮಣ್ಣೂನೂ....ಒಂದ್ಮರ್ದಲ್ಲಿ.. ಬೇಗ....!" ಮಕ್ಕಳೆಲ್ಲಾ ಕಿರು ಚುಕ್ಕೆ ಶುರುಮಾಡಿದವು.

(ಇದೇನಾಯ್ತಮ್ಮಾ ಇದ್ದಕ್ಕಿದ್ದಾಗೇ! ಕಲ್ಲೂ ಮಣ್ಣೂಂತ ಕಿರಚ್ತಿದಾರೆ! ....ಬೇಳ್ಗೀಳೇನಾದ್ರೂ ಬೀಸ್ತೋ, ಜರಿ ಏನಾದ್ರೂ ಹರ್ಕೊಂಡು ಬಂತೇ? ....ನಮ್ಮನ್ಲೂ ಜೋಪಾನ್ಮಾಗ್ಬೇಕು, ಹಾಳ್ಗಲೀಜು ಈ ಸೌದೇ ಬೇಣೇದು.... ಸಧ್ಯ ಯಾರ್ಗೂ ಕಚ್ಚಿಲ್ದೇ ಇದ್ರೆ ಸಾಕು ಪಾಪ!)

“ಅಯ್ಯೋ! ಆಸ್ಪತ್ರೇಂದ್ರೇ!....ಆಸ್ಪತ್ರೇ!.....ಆ!....ಮಂಚಗ್ಳೇ?..... ಇವೇಂದ್ರೇ ಎಂಟವೆ ಅಲ್ಲಿ!....”

“ಹಾಸ್ಗೇಗಳು?”

“ಎಲ್ಲಾ ಇವೆ. ಹಾಸ್ಗೇಗಳು ಅಂತಾ ಚೆನ್ನಾಗಿವೆ....ಹಸಿರೇದ ವರ್ಣವೇ ನೋಡಿಲ್ವೇ ನಾನು!....ಡಾಕ್ಟ್ರು, ನರ್ಸು ಎಲ್ಲಾ ಇದಾರೆ.

“ಅಲ್ವೇ, ವಾರ್ಡೋ?”

“ಅಲ್ಲೇ, ಆ ಕಡೆ ಆರ್ಡಿನರಿ ವಾರ್ಡು, ಈ ಕಡೆ ಸ್ಪೆಷಲ್ವಾರ್ಡು!

“....ಸಧ್ಯ ಸ್ಪೆಷಲ್ವಾರ್ಡ್ ಸರಿಯಾಗಿದ್ಯೇನೇ?”

ನನಗೆ ಮೈ ಬೆವರಿಟ್ಟಿತು. ಇದೇನು, ಊರು ಕೇರಿ ಮನ ಕಾಡ್ತಿದ್ದೋರು, ಇದ್ದಕ್ಕಿದ್ದ ಹಾಗೇ ಆಸ್ಪತ್ರೆ. ವಾರ್ಡು ಅಂತಿದಾರೆ! ಬೆಳಗಾದ್ರೆ ಹಬ್ಬ. ಏನಾಗ್ಹೋಯ್ತಮ್ಮ ಪಾಪ! ಚೇಳೋ ಕಚ್ತೋ ಹಾವೇ ಹಾಯ್ತೋ.. ಇಲ್ಲಾ ಆಕೇಗೇನಾದ್ರೂ....ಆಕೇಗೆ ಆಸ್ಪತ್ರೇ ಅವಶ್ಯಕತೇಗೆ ಇನ್ನೂ ಮೂರು ತಿಂಗಳು ಅವಧೀ ಯೇನೋ ಇತ್ತು....ಆದ್ರೂ....?)

ಮಕ್ಕಳು ಒಟ್ಟಿಗೆ ‘ಹೋ’ ಎಂದು ಆರ್ಭಟಿಸಿದವು. ನನ್ನ ಮನಸ್ಸು ಇನ್ನು ನಿಲ್ಲಲಿಲ್ಲ. ಏನನಾಹುತ್ವೋ ಏನೋ, ನೇರೇ ಕೇಳಿಬಿಟ್ರೆ ಅಷ್ಟೂ ಬೇಡ್ವೇ? ನವಿಲ್ಕೋಸು ನೆಲಕ್ಕೆ ಕುಕ್ಕಿ ಒಂದೇ ಉಸಿರ್ಗೆ ಧಾವಿಸ್ದೆ!

* * *

ಜವಳೀ ಮನೇಲಿ ಆತ-ಆಕೆ ಬೊಂಬೇ ಕೂರಿಸ್ತಿದ್ರು. ಬೆಟ್ಟಕ್ಕೇಂತ ಹೊತ್ಕಲ್ಲಲ್ಲಿ ಕೈಜಜ್ಕೊಂಡ ಹುಡ್ಗ ಕೇಚ್ತಿದ್ದ “ಮಕ್ಕಳ ಹಬ್ಬಕ್ಕೇಂತ” ಇಡ್ತಿದ್ದ ಬೊಂಬೇನ ಮುಟ್ಟಿದ ತಪ್ಪಿಗೆ ಹೊಡಸ್ಕೊಂಡ ಮತ್ತೊಂದು “ಮಕ್ಳು” ಹಿಮ್ಮೇಳ ಅರಚ್ತಿದ್ವು!

— ಕೆ. ಸುನಂದಮ್ಮ.

ಇನ್ನು ಮೇಲೆ, ದೀಪಾವಳಿಗೆ ಅಳಿಯ ಮನೆಗೆ ಬರೋದಕ್ಕಿಂತ ಸೊಸೆ ಹಬ್ಬಕ್ಕೆ ಬರೋದೇ ಚೆನ್ನು ಎಂದು ವರಾಮಂದಿರ ಸಭೆಯಲ್ಲಿ ತೀರ್ಮಾನವಾಯಿತಂತೆ.

—ಸುಗ್ಗೀಗೆ ಮುಂಚೆ ದೀಪಾವಳಿ ಬಂದರೆ ಹೀಗೇ ಮಾಡಬೇಕು.

* * *

ಕನ್ನೋಜಿಯ ಲೇಖನ

ಎಲೆ ಅಡಿಕೆ ಹಾಕುತ್ತಿದ್ದಾಗ ಕಡ್ಡಿಪುಡಿ ಮುಗಿದುಹೋಗಿದ್ದು ಗೊತ್ತಾಯ್ತು. ಕಡ್ಡಿಪುಡಿ ಇಲ್ಲದೆ ಎಲೆ ಅಡಿಕೆ ಮಜವೇ ಇರುಲ್ಲ ಅಲ್ಲವೇ? ಆದಕ್ಕೋಸ್ಕರ ಪಕ್ಕದಲ್ಲಿದ್ದ ಮುನ್ಸ್ವಾಮಿ ಗುಡಿಸಲಿಗೆ ಹೋಗಿ ಇಸುಕೊಂಡು ಬರೋಣ ಹೇಗೂ ರಜ, ಮನೇಲಿ ಇರ್ತಾನೆ ಅಂತ ಹೋದೆ. ಗುಡಿಸಿಲ ಹತ್ತಿರವೇ ಏನೋ ವಾಸನೆ. ಅಡಿಗೆ ಸ್ವಲ್ಪ ಹೊತ್ತೇನೋ ಇವತ್ತು ಅಂತ ಅಂದುಕೊಂಡು ಗುಡಿಸಿಲೊಳಕ್ಕೆ ಕಾಲಿಟ್ಟೆ. ಒಂದು ಮೂಲೇಲಿ ಒಂದು ಸಣ್ಣ ಕಡಾಯಿನಲ್ಲಿ ಏನನ್ನೋ ಬೇಯಿಸುತ್ತಾ ಸಾಕ್ಷಾತ್ ಮುನಿಸ್ವಾಮಿನೇ ಒಲೆ ಉರಿಸ್ತಿದ್ದ. ಇದೇನು ಬಂತು ಇವನಿಗೆ, ಒಲೆ ಮುಂದೆ ನಡುಹಗಲು ಕೂತಿದ್ದಾನೆ ಎಂದುಕೊಂಡೆ.

"ಮುನ್ಸ್ವಾಮಿ! ಸ್ವಲ್ಪ ಕಡ್ಡಿಪುಡಿ ಕೊಡು, ಏನು ಬೇಯಿಸ್ತಾ ಇದಿ" ಅಂದೆ.

ಕಡ್ಡಿಪುಡಿ ಚೀಲದಿಂದ ತೆಗೆದುಕೊಟ್ಟ. ಅವನ್ನು ಹಾಕಿ ಜಗಿಯುತ್ತಿದ್ದಾಗ ಹೇಳಿದ "ರೆಡ್ಡಿ ಹೇಳಿದ ನೋಡು, ಬೆಲ್ಲದ ಜೋನೀನ ತೊಗೊಂಡು ಇನ್ನೂ ಆದೂ ಇದೂ ಸೇರಿಸಿ ಪಾಕ ಇಳಿಸಿದರೆ, ಬಂದ ಆವೀನೆಲ್ಲಾ ಈ ರೀತಿ ಕಡಾಯಿಂದ ಬೇರೆ ಗಂಗಾಳಕ್ಕೆ ಬಿಟ್ಟರೆ, ಷರಾಬತ್ತು ಸಿಕ್ಕುತ್ತೆ ಅಂತ. ಅವನು ಹೇಳಿದ ಹಾಗೇ ಮಾಡಿದೆ. ಇನ್ನರ್ಧ ಗಂಟೇಲಿ ಪಾಕ ಇಳಿಯುತ್ತೆ" ಎಂದು.

ಅರ್ಧ ಗಂಟೆ ಆಯ್ತು. ಗಂಗಾಳದಲ್ಲಿ ಒಂದು ಸೀಮೆಯೆಣ್ಣೆ ಬುಡ್ಡಿಯಷ್ಟು ಷರಾಬತ್ತು ಕೂಡಿತ್ತು. ಒಂದು ಚಮಚ ರುಚಿ ನೋಡು ಅಂತ ಕೊಟ್ಟ. ಕುಡಿದೆ.

ಎಲಡಿಕೆ ಹಾಕಿ ನಾಲಿಗೆ ಜಡ್ಡುಗಟ್ಟಿತ್ತು. ಮೆಣಸಿನಕಾಯಿ ಅಗಿದರೂ ಖಾರ ತಿಳಿಯುಲ್ಲ ನನಗೆ. ಆದರೆ ಈ ಷರಾಬತ್ತು ನಾಲಿಗೆ ಮೇಲೆ ಬಿದ್ದ ಕೂಡಲೆ ಕೂತಿದ್ದವನು ನಿಂತೆ. ಬಾಯಿಗೆ ಬೆಂಕಿ ಬಿದ್ದ ಹಾಗಾಯ್ತು. ನುಂಗಿದೆ. ಗಂಟಲು ಉರಿಯಿತು. ಕಣ್ಣೀರಿಡ್ತು. ಹೊಟ್ಟೆ ಬಿಸಿಬಿಸಿಯಾಯ್ತು.

ಅಷ್ಟು ಹೊತ್ತಿಗೆ ಹೊರಗೆ ಬೂಟ್ಸ್ ಶಬ್ದ ಆಯಿತು. ಭರ್ಜರಿ ಬೂಡ್ಸಿನದು. ಯಾರು? ಅನ್ನೋ ಹೊತ್ತಿಗೆ ಪೋಲೀಸಿನವ ಒಳಕ್ಕೆ ಬಂದೇಬಿಟ್ಟ.

ವಿರಾಮವಾಗಿ ದೃಷ್ಟಿಯನ್ನು ಎಲ್ಲಾಕಡೆಗೂ ಪಸರಿಸಿದ.

"ಏನ್ರೋ! ಏನು ಮಾಡ್ತಾ ಇದ್ದೀರಿ" ಎಂದ.

"ಬೆಲ್ಲದ ಪಾಕ ಮಾಡ್ತಾ ಇದ್ದೀವಿ, ನಾಳೆ ಮಗಳಿಗೆ ಹುಟ್ಟಿದ ಹಬ್ಬ. ಅರಳು ಉಂಡೆ ಕಟ್ತೀವಿ" ಎಂದೆ ನಾನು.

"ಕಡಾಯಿನಲ್ಲಿ ಪಾಕ ಇಳಿಸಿದರೆ ಗಂಗಾಳ ಏಕೆ?" ಎಂದ ಮೀಸೆ ತಿರುವುತ್ತಾ.

"ಸಕ್ಕರೆ ಸಿಗುಲ್ಲ, ಪಾಕ ಮಾಡೋವಾಗ ಸಿಹಿ ಏನಾದರೂ ಆವಿ ಆದರೆ ಅದನ್ನು ಹಿಡಿದುಕೊಳ್ಳೋಣ ಅಂತ ಗಂಗಾಳ ಇಟ್ಟೆ" ಎಂದೆ ನಾನೇ.

ಮುನಿಸ್ವಾಮಿ ಮಾತೇ ಆಡಲಿಲ್ಲ.

ಅವ ಒಂದು ಚಮುಚಾನೂ ರುಚಿ ನೋಡಿರಲಿಲ್ಲ.

"ಪಾನನಿರೋಧ ಕಾನೂನು ಗೊತ್ತಾ! ಇದನ್ನೆಲ್ಲಾ ಜಫ್ತಿ ಮಾಡ್ತೀನಿ. ನಿನ್ನ ಹೆಸರೇನು" ಎಂದ.

"ತಿರುಮಲರಾಯ" ಎಂದೆ.

"ಅವನ ಹೆಸರು" ಎಂದ ಪೋಲೀಸಿನವ.

"ನಾನಾರಾಯ" ಎಂದೆ.

ಎರಡು ಹೆಸರನ್ನೂ ಬರೆದುಕೊಂಡ. ಸೀಟಿ ಹಾಕಿದ. ಇನ್ನಿಬ್ಬರು ಪೋಲೀಸಿನವರು ಬಂದರು. ಕಡಾಯಿ ಗಂಗಾಳಾ ಎಲ್ಲವನ್ನೂ ತೆಗೆದುಕೊಂಡು ಹೊರಟುಹೋದರು. ಸಾಯಂಕಾಲ ತಿರುಗಿ ಬರ್ತೀನಿ ಇದನ್ನ ಇನ್ಸ್‌ಪೆಕ್ಟರಿಗೆ ತೋರಿಸಿ ಹುಕುಂ ತಗೊಂಡು ಬರ್ತೀನಿ ಅಂತ.

* * *

ಆಗ ಮುನಿಸ್ವಾಮಿ ಬಾಯಿಬಿಟ್ಟ "ಎಲಾ! ಎಷ್ಟು ಬೇಗ ಬೇಗ ಸುಳ್ಳು ಹೇಳಿದೆ ನೀನು" ಅಂದ.

ಆ ಚಮುಚಾ ಜ್ಞಾಪಿಸಿದೆ.

"ಈಗೇನು ಮಾಡೋದು" ಅಂದ.

"ಸುಮ್ಮನಿರೋಣ. ಅವ ಏನು ಮಾಡ್ತಾನೋ ಅದು ನೋಡಿಕೊಂಡು ನಾವು ಮುಂದಿನ ಕೆಲಸ ಮಾಡೋಣ" ಎಂದೆ.

"ಇದೆಲ್ಲಾ ಸುಖವಿಲ್ಲ! ಈಗಲೇ ಓಡಿಹೋಗೋಣ" ಅಂದ ಮುನಿಸ್ವಾಮಿ.

"ಎಲ್ಲಿಗೆ" ಅಂದೆ.

"ಎಲ್ಲಿಗಾದರೂ" ಅಂದ.

"ಬಿಡ್ಲಾ! ಇದಕ್ಕೆ ಹೆದರ್ತಾರಾ! ನಾವೆಲ್ಲಾ ಕಾರ್ಮಿಕರ ಗುಡಿಸಲಲ್ಲಿದ್ದೇವೆ. ಎಲ್ಲರೂ ಒಟ್ಟು ಸೇರಿದರೆ ಅವ ಏನು ಮಾಡ್ತಾನೆ? ಅಂದ್ಹಾಗೆ ಹೇಗೆ ಬಂದ ಅವ ಧೈರ್ಯವಾಗಿ ಇಲ್ಲಿಗೆ, ಆ ಚಮಚ ಕುಡೀದೇ ಇದ್ದರೆ ಅವನ ತಲೆ ಚೆಂಡಾಡ್ತಿದ್ದೆ" ಅಂದೆ ನಾನು.

"ಅಯ್ಯೋ!" ಎಂದು ಅತ್ತ ಮುನ್ನಾಮಿ.

"ಸಮದಾಯಿಸೋ ಹೊತ್ತಿಗೆ ಐದು ಗಂಟೆ ಆಯ್ತು.

* * *

ಪೋಲೀಸಿನವ ಬಂದ. ಹಸುವಿನ ಹತ್ತಿರ ಕರು ಬರೋ ಹಾಗೆ, ನಗುತ ನಗುತ ಬಂದ. ಭರ್ಜರಿ ಬೂಟ್ಸು ಶಬ್ದ ಮಾಡದ ಹಾಗೆ ನಡೆದು ಬಂದ. ಬೂಟ್ಸು ಇಜಾರ ಇದ್ದರೂ ನೆಲದ ಮೇಲೆ ಚಕ್ಕಳಮುಟ್ಟಿಗೆ ಹಾಕಿ ಕೂತು ಕೊಂಡ.

"ಅಯ್ಯಾ! ಅಂದ.

"ನನಗೆ ಮೂರು ಮಕ್ಕಳು, ಒಂದು ಹೆಂಡತಿ, ಒಂದು ಮಾವ, ಒಂದು ಅತ್ತೆ. ಈ ಕೆಲಸ ಹೋದರೆ ಅನ್ನಕ್ಕೆ ಬೇರೆ ಗತಿಯಿಲ್ಲ, ಎಲ್ಲರಿಗೂ. ಇನ್ಸ್ಪೆಕ್ಟರ ಹತ್ತಿರ ಹೋದೆ. ಅವರು ಒಂದು ಚಮಚಾ ಅಜಮಾಯಿಷಿ ಮಾಡಿದರು. ಕೂಡಲೆ ಹುಕುಂ ಕೊಟ್ಟರು.

"ಈ ಷರಾಬತ್ತು ಇಳಿಸಿದವರ ಹತ್ತಿರವೇ ಇನ್ನು ಒಂದು ಗಂಗಾಳ ಷರಾಬತ್ತು ಇವನ್ನು ಎಂಟು ದಿನಗಳಲ್ಲಿ ತರದೇ ಇದ್ದರೆ ನಿನ್ನನ್ನ ಬರ್ತರಫ್ ಮಾಡ್ತೀನಿ" ಅಂತ.

"ಅಯ್ಯಾ! ಅಯ್ಯಗಳಿರಾ! ನನ್ನ ಮೇಲೆ ದಯವಿಟ್ಟು ನನ್ನ ಅನಾಥ ಸಂಸಾರದ ಮೇಲೆ ದಯವಿಟ್ಟು ನನ್ನ ಕೆಲಸ ಉಳಿಸಿಕೊಡಿ" ಎಂದು ಅಂಗಲಾಚಿದ ಪೋಲೀಸಿನ ಸಂಸಾರವಂದಿಗ.

—ಕನ್ನೋಜಿ.

ಮಾನ್ಯ ಸಂಪಾದಕರಿಗೆ :—

ಕನ್ನೋಜಿ ಮಾಡುವ ಸಾಷ್ಟಾಂಗ........... ....

ಮೊನ್ನೆ ಕೂಲಿಕಾರರ ವಸತಿಯಲ್ಲಿ ಊಟಕ್ಕೆ ಹೋಗಿದ್ದೆ. ಹಸಿವು ಬಾಯಾರಿಕೆಗಳನ್ನು ಇಂಗಿಸಿ ಮನೆಗೆ ಬಂದೆ. ಕೆಟ್ಟ ಕನಸು ಬಿದ್ದ. ಬೆಳಗೆದ್ದರೆ ಕನಸು ಅಚ್ಚಳಿಯದಂತಿತ್ತು. ಹಾಗೇ ಬರೆದೆ. ಯಾವ ಪತ್ರಿಕೆಯಲ್ಲೂ ಇದನ್ನು ಅಚ್ಚೊತ್ತುವುದಿಲ್ಲ. ಅದು ನನಗೆ ಗೊತ್ತು. ಅದಕ್ಕಾಗಿ ನಿಮಗೆ ಕಳಿಸಿದ್ದೇನೆ.

ನಿಮ್ಮವ—ಖಂಡಿತ ನಿಮ್ಮವ,

ಕನ್ನೋಜಿ.

ಮನ ಮಿಡಿದ ಮೊಗ

ಶ್ರೀಯುತ ಘಾಟೆಯವರಿಗೆ ಆಕಾಶವಾಣಿಯವರಿಂದ ಒಂದು ಪತ್ರ ಬಂದಿತು. ನಮ್ಮ ಭಾಷಣಕಾರರ ಹರಟೆಗಾರರ ಹಾಗೂ ಕಲಾವಿದರ ಫೋಟೋಗಳನ್ನು ಪ್ರಕಟಿಸಿ ಪ್ರಚುರ ಪಡಿಸಬೇಕಾಗಿದೆ. ತಾವು ತಮ್ಮ ಫೋಟೋ ಒಂದನ್ನು ಕಳುಹಿಸಿಕೊಡಿ. ತಾವು ಹಾಸ್ಯಗಾರರು. ಫೋಟೋ ನೋಡಿದರೇ ಜನರಿಗೆ ಮನಸ್ಸಿನ ಮೇಲೆ ಪರಿಣಾಮವಾಗಬೇಕು” ಎಂದಿತ್ತು ಪತ್ರದಲ್ಲಿ.

ಘಾಟೆಯವರಿಗೆ ಅವರ ಮೊಗ ಎಂದೂ ತೊಂದರೆ ಕೊಟ್ಟಿದ್ದಿಲ್ಲ. ಬೆಳಿಗ್ಗೆ ಎದ್ದು ಕ್ಷೌರ ಮಾಡಿಕೊಂಡಾಗಲೂ ತೊಂದರೆ ಕೊಟ್ಟಿದ್ದಿಲ್ಲ. ಚಿಕ್ಕ ಮಕ್ಕಳು ಯಾವುದೂ ಇವರ ಮೊಗ ನೋಡಿ ಬೆಚ್ಚಿ ಬಿದ್ದಿದ್ದಿಲ್ಲ. ಎಲ್ಲಾ ಮುಖಗಳ ಹಾಗೆಯೇ ಅದೂ ಒಂದು. ಆದರೆ ಈ ಫೋಟೋ ಚುನಾವಣೆ ಬಂದಾಗ ತಾಪತ್ರಯಕ್ಕೆ ಇಟ್ಟುಕೊಂಡಿತು. ಹಾಸ್ಯಗಾರನ ವ್ಯಕ್ತಿತ್ವವನ್ನು ಸೂಚಿಸುವಂತಹ ಫೋಟೋ ಆಗಬೇಕು. ಕನ್ನಡಿ ಎದುರಿಗೆ ಅಭ್ಯಾಸಕ್ಕೆ ಶುರು ಮಾಡಿ. ಈ ತರಹ ಮುಖದ ಭಾವ ಇದ್ದಾಗ ಫೋಟೋ ತೆಗಿಸಿಕೊಳ್ಳಬೇಕು ಎಂದು ಸಿದ್ಧಾಂತ ಮಾಡಿದ.

ಆ ರೀತಿ ತೆಗೆದ ಫೋಟೋವನ್ನು ನನಗೆ ತೋರಿಸಿದ. ನಾನಂದೆ, “ಘಾಟೇ! ಈ ಚಿತ್ರ ಪ್ರಚಾರ ಮಾಡಿದರೆ ಚಿಕ್ಕ ಮಕ್ಕಳೆಲ್ಲಾ ಚಿತ್ರಕ್ಕೆ ಮೀಸೆ ಬರೆದು. ಶ್ರೀಯುತ ಮೀಸೆ ಘಾಟೆ ಅಂತ ಕೆಳಗೆ ಬರೆಯುತ್ತಾರೆ” ಎಂದು ಅದನ್ನು ಮೂಲೆಗಿಟ್ಟೆ.

ಇನ್ನೊಂದು ಹಾವ ಭಾವ ತೋರಿಸಿ ಫೋಟೋ ತೆಗೆಸಿದ. ಅದನ್ನು ತೋರಿಸಿದ. “ಇವರಲ್ಲಿ ಕಠಿಣತ್ವ ಹೆಚ್ಚಾಗಿದೆ. ಮಾಸ್ಕೋವಲ್ಲಿ ತೆಗೆಸಿದ ಫೋಟೋ ಹಾಗಿದೆ. ಈ ಜನತಾ ರಾಜ್ಯದಲ್ಲಿ ಅಷ್ಟು ಕಠಿಣ ಮೊಗ ಇದ್ದರೆ ಹಾಸ್ಯಗಾರ ಅಂತ ಯಾರು ಅನ್ನುತ್ತಾರೆ” ಎಂದು ಟೀಕಿಸಿದೆ.

ಮತ್ತೊಂದು ಫೋಟೋ ತೆಗೆಸಿದ. ತೋರಿಸಿದ.

“ಇದೇನೋ ಹೀಗಿದೆ, ಘಾಟೆ. ಬಾಯಿಬಿಟ್ಟರೆ ‘ಬ್ಯಾ’ ಅನ್ನೋ ಹಾಗಿದೆಯಲ್ಲೋ! ಮಾರ್ನವಮಿ ದಿನ ಚಿತ್ರಾನ್ನೇ ಬಲಿ ಕೊಡೋ ಹಾಗಿದೆಯಲ್ಲೋ. ನೀನು ಕುರಿಯಾಗಿರಬಹುದು. ಅಂದ ಮಾತ್ರಕ್ಕೆ ಫೋಟೋದಲ್ಲೂ ಹಾಗೆಯೇ ಇರಬೇಕೆ” ಎಂದೆ.

ಶ್ರೀ ಧಾಟಿಯವರು ಸುಸ್ತು. ಏನಯ್ಯಾ ಮಾಡಲಿ. ನನ್ನ ಮೊಗ ಹೀಗೆ ನನ್ನ ಮನಸ್ಸನ್ನೇ ಕೊಲ್ಲುತ್ತದೆ ಎಂದು ತಿಳಿದಿರಲಿಲ್ಲ. ಏನಾದರೂ ಉಪಾಯ ಹೇಳಯ್ಯಾ" ಅಂದ.

ಆತನನ್ನು ನೋಡಿ ಮರುಗಿದೆ. ಏನಾದರೂ ಮಾಡಿ ಆತನ ಕಷ್ಟ ನೀಗಿಸ ಬೇಕು ಎಂದು. ಪತ್ರಿಕೆಗಳನ್ನೆಲ್ಲಾ ತಿರಿವಿದೆ: ಆಗ ಹೊಳೀತು ಮನಸ್ಸಿಗೆ. ಅವನಿಗೆ ಹೇಳಿದೆ.

"ನೋಡಯ್ಯಾ! ಧಾಟಿ. ನೀನು ಯಾವ ಫೋಟೋ ಕಳಿಸಿದರೂ ಪರವಾಗಿಲ್ಲ. ಅದನ್ನು ಪ್ರಚುರಪಡಿಸೋ ಹೊತ್ತಿಗೆ ಎಲ್ಲವೂ ಈ ರೀತಿ ಆಗಿರುತ್ತವೆ ಎಂದು ಕೆಲವು ಪತ್ರಿಕೆಗಳ ಹಲವಾರು ಫೋಟೋಗಳನ್ನು ತೋರಿಸಿದೆ. ಅಂದ ಮೇಲೆ ನೀನು ಯಾವ ಫೋಟೋ ಕಳಿಸಿದರೂ ಪ್ರಚುರವಾದ ಮೇಲೆ ಯಾರಿಗೂ ಈ ಚಿತ್ರ ಯಾರದು ಅಂತ ಗೊತ್ತಾಗುಲ್ಲ. ಭಯ ಪಡಬೇಡ" ಎಂದೆ. ಮನ ಮಡಿದ ಮೊಗ ತಿರುಗಿ ಅರಳಿತು.



"ಅಮ್ಮಾ ಬರುವವರೆಗೂ ಸುಮ್ಮನಿರ್ತೀಯ, ಅಥ್ವಾ ಅಲ್ಲಿ ಹೋಗೋ ಪೋಲೀಸಿನವನಿಗೆ ಕೊಡ್ಲೊ?!"

ಅವನತಿ

ಬೇಡವೆಂದವನಿಗೆ ಎಲ್ಲವೂ ಕೂಡಿ ಬರುತ್ತದೆ. ಕೂಡಿಸಿಕೊಂಡವನಿಗೆ ಅದೇ ಮೃತ್ಯು. ತ್ಯಾಗಾನಂದರು ಎಲ್ಲವನ್ನೂ ತ್ಯಜಿಸಿದರು. ಅದನ್ನೇ ಬೋಧಿಸಿದರು. ಅವರ ಶಿಷ್ಯಮಂಡಲಿ ಹೆಚ್ಚಿತು. ಅವರೂ ತ್ಯಾಗಿಗಳಾದರು. ತ್ಯಾಗ ಪಂಥವೊಂದು ಸ್ಥಾಪಿತವಾಯಿತು. ಭೋಗವನ್ನು ಖಂಡಿಸಿದರು. ತ್ಯಾಗಾನಂದರನ್ನು ಜನ ಕೊಂಡಾಡಿತು. ಪಂಥ ಹಿಗ್ಗಿತು. ತ್ಯಾಗಾನಂದರನ್ನು ಜನ ಮೆರೆಸಿದರು. ಪಂಥ ಮೆರೆಯಿತು. ತ್ಯಾಗಾನಂದರ ತಲೆಯಮೇಲೆ ಸುವರ್ಣವೃಷ್ಟಿಯಾಯಿತು. ಅವರ ಶಿಷ್ಯರು ಅದನ್ನು ಆರಿಸಿಕೊಂಡರು. ತ್ಯಾಗಾನಂದರನ್ನು ಪಲ್ಲಕ್ಕಿಯಲ್ಲಿ ಹೊತ್ತರು. ಅವರ ಶಿಷ್ಯರು ಹಿಂದೆ ನಡೆದರು. [illegible]ರಲಿಲ್ಲ. ತ್ಯಾಗಾನಂದರು ಕಾಲವಾದರು, ಜೀವ ತ್ಯಜಿಸಿದರು. ಶಿಷ್ಯರು ಅವರ ಹೆಸರಿನಲ್ಲಿ ಮಠ ಕಟ್ಟಿದರು. ಪೂಜೆ ನೈವೇದ್ಯ ಧನಕನಕ ಎಲ್ಲವೂ ಶಿಷ್ಯರ ವಶವಾಯಿತು. ಅವರು ತ್ಯಾಗ ಬೋಧಿಸಿದರು. ಭೋಗ ಸವಿದರು. ಗುರುವಿನ ಸಮಾಧಿ ಬಳಿ ಕುಳಿತು ಗುರುವನ್ನು ಮತ್ತೆ ಮತ್ತೆ ಕೊಂದರು.



"ಊಟದ ಹೋಟೇಲಿಗೆ ಮಾತ್ರ ಟವಲ್ ತೆಗೆದುಕೊಂಡು ಹೋಗಬಾರದು ನೋಡಿ, ಎಲ್ಲರೂ ಕೈ ಬಾಯಿ ಒರಸುಕ್ಕೆ ಬರುತ್ತಾರೆ."

ಒಂದು ಬಹಿರಂಗ ಪತ್ರ

ಸರಸ್ವತಿಯುತ ವಿಜ್ಞಾನ ಪ್ರಚಂಡ...............ರಿಗೆ.

ಮಹಾಸ್ವಾಮಿ,

ತಾವು ಅತ್ಯಾಧುನಿಕ ವಿಜ್ಞಾನ ಪರಿಶೋಧನೆಗಳನ್ನು ನಡೆಸಿ, ಸಮಷ್ಟಿಯ ರಹಸ್ಯಗಳನ್ನೆಲ್ಲಾ ಬೆತ್ತಲೆ ಕಂಡಿದ್ದೀರಿ ಅಂತ ಕೇಳಿ ಬಹಳ ಸಂತೋಷವಾಯಿತು. ಆದರೂ ನಮ್ಮಂತಹ ಪಾಮರರಿಗೆ, ಪೇಟೆಯಲ್ಲಿ ವಾಸಿಸುವ ಪಾಮರರಿಗೆ ಅಷ್ಟಾಗಿ ನಿಮ್ಮಿಂದ ಇನ್ನೂ ಪ್ರಯೋಜನವಾಗಿಲ್ಲ. ನಮ್ಮ ಕಷ್ಟಗಳೇನೆಂಬುದು ನಿಮಗೆ ತಿಳಿಯದೇ ಇರುವುದೇ ಇದಕ್ಕೆ ಕಾರಣ ಎಂದಂದುಕೊಂಡು ಈ ಪತ್ರ ಬರೆಯುತ್ತಿದ್ದೇನೆ. ನಿಮ್ಮ ಸ್ನೇಹಿತ ವಿಜ್ಞಾನ ಮಾರ್ತಾಂಡರಿಗೆಲ್ಲಾ ಈ ಕಾಗದವನ್ನು ಷರಾ ಸೂಚಿಸಿ ಕಳಿಸಿದರೆ ಲೋಕ ಕಲ್ಯಾಣವಾಗುತ್ತದೆ. ನಿಮ್ಮ ಮುಂದಿನ ಕಾರ್ಯಕ್ರಮಕ್ಕೆ ಈ ಪಟ್ಟಿಯನ್ನು ಉಪಯೋಗಿಸಿಕೊಂಡರೆ ಚೆನ್ನು.

೧) ಒಂದು ಲೋಟ:—ಮಾಣಿ ಬೆರಳನ್ನು ಒಳಕ್ಕೆ ಹಾಕಿದ ಕೂಡಲೇ ಲೋಟಾದ ಅಂಚು ಆ ಬೆರಳನ್ನು ಕಟಕಾರಿಸಬೇಕು.

೨) ಹಾಲಿನ ಪಾತ್ರೆ:—ನೀರು ಹೆಚ್ಚಾದ ಹಾಲು ಒಳಕ್ಕೆ ಬಿದ್ದ ಕೂಡಲೇ ಪಾತ್ರೆಯು ಕೆಂಪಾಗಿ ಲಬೋ ಲಬೋ ನಾವ ಹೊರಡಬೇಕು.

೩) ಹೊಸ ತಕ್ಕಡಿ:—ವ್ಯಾಪಾರಸ್ಥ ಅದನ್ನು ಕಿರುಬೆರಳಿಂದ ಅನ್ಯಾಯವಾಗಿ ಅಮುಕಿದಾಗ ಅಲ್ಲೇ ಚೇಳು ಕುಟುಕಿದಂತೆ ಕುಟುಕುವ ತ್ರಾಸು.

೪) ಟೋಪಿ:—ಕೆಟ್ಟ ಯೋಚನೆ ತಲೆಯೊಳಕ್ಕೆ ಬಂದ ಕೂಡಲೇ ಕಪ್ಪಾಗಿ ಹೊರಬೀಳುವಂತಹ ಬಿಳಿ ಟೋಪಿ.

೫) ಉಂಗುರ:—ಹುಂಬಡಿಯಲ್ಲಿ ಹಣ ತೆಗೆದುಕೊಂಡಾಗ, ಲೋ! ಲೋ!! ಲೋ!!! ಅಂತ ಕೂಗಿಕೊಳ್ಳುವಂತಹ ಉಂಗುರ.

೬) ಮೈಕ್:—ಭಾಷಣಕಾರ ತಲೆಯುಬ್ಬಿ ಮಾತನಾಡಲಾರಂಭಿಸಿ ಕಡೆಗೆ ನೀತಿಬೋಧ ಮಾಡಲು ಶುರುಮಾಡಿದಾಗ, ಭಾಷಣಕಾರನ ಮೂಗನ್ನು ಹಿಡಿದು ಎರಡು ಕೆನ್ನೆಗೂ ರಪ್ಪಂತ ರಾಚುವಂತಹ ಮೈಕ್.

೭) ಛತ್ರಿ:—ಪರಪುರುಷ ಹಾಗೂ ಪರಸ್ತ್ರೀ ಸ್ಪರ್ಶವಾಗುತ್ತಿದ್ದ ಕೂಡಲೇ ಬಿಡಿ ಕೆಂಪೇರಿ, 'ಬಿಡಿ ಅಂದ್ರೆ' ಅಂತ ಕೂಗುವ ಛತ್ರಿ.

೮) ಚಪ್ಪಲಿ:—ಸಭೆ ಸಮಾರಂಭದಿಂದ ಹೊರಗೆ ಬಂದಾಗ ಕಂಡವರ ಚಪ್ಪಲಿಗೆ ಕಾಲಿಟ್ಟರೆ, ಕೂಡಲೆ ಕಡಿಯುವಂತಹ ಚಪ್ಪಲಿ.

೯) ಜಾತಕ:—ಜ್ಯೋತಿಷಿಯು ಮಗುವಿನ ಆರ್ಥಿಕ ಅಂತಸ್ತು ನೋಡಿ, ಅಧಿಕ ಫಲ ಬರೆಯಲು ಯತ್ನಿಸಿದಾಗ, ನಕ್ಷತ್ರಗಳು ಅವನಿಗೆ ಕನಸಿನಲ್ಲಿ ಕಾಣುವಂತೆ ಮಾಡುವ ಹೋರಾರಾಶಿ.

೧೦) ಫೌಂಟನ್‌ಪೆನ್:—ಪ್ರಶ್ನೆ ಪತ್ರಿಕೆಗಳು ಕೈಗೆ ಬಂದಾಗ, ಈ ಪೆನ್ನನ್ನು ಕಾಗದಕ್ಕೆ ಮುತ್ತಿಡಿಸಿದರೆ ಅದೇ ಸ್ವಯಂ ಬರಹಗಾರನಂತೆ ಬರೆಯುವ ಫೌಂಟನ್‌ಪೆನ್.

ಈ ಹತ್ತು ವಿಷಯಗಳಲ್ಲಿ ಸಂಶೋಧನೆ ನಡೆಸಿ ಕೃತಕಾರ್ಯರಾದರೆ ಇಂದಿನ ಜನಾಂಗಕ್ಕೆ ಬೆನ್ನುಬಲ ಕೊಟ್ಟಂತೇ ಆಗುತ್ತದೆ.

ಯೋಚಿಸಿ ನೋಡಿ !

ನಿಮ್ಮವ,

ವಿ.ಸೂ.— **ರಾ. ಶಿ.**


ಓದುಗರಿಗೆ:—

ಅಯ್ಯಾ ! ವಾ ! ಅಮ್ಮಾ !

ನಿಮಗೆ ಈ ತೆರನಾದ, ಜನಜೀವನಕ್ಕೆ ಸಾರ್ಥಕವಾದ ಯೋಚನೆಗಳು ಹೊಳೆದರೆ, ಬೇರೆ ಕೆಲಸ ಇಲ್ಲದಿದ್ದರೆ, ಖಾಯಿ ಕಾಗದ ಇದ್ದರೆ, ನನಗೆ ಬರೆದು ಕಳಿಸಿ. ನಾನವನ್ನು ವಿಜ್ಞಾನ ಮಾರ್ತಾಂಡರಿಗೆ ಕಳಿಸಿ ಇಹಲೋಕದ ಕಷ್ಟವನ್ನು ಪರಿಹರಿಸಲು ಸಾಕ್ಷಾತ್ ಶ್ರೀಮನ್ನಾರಾಯಣನಂತೆ ಯತ್ನಿಸುತ್ತೇನೆ.

ನಿಮ್ಮವ,

ಸಂಪಾದಕ.



ಚಿಲ್ಲೇರಿ

"…..ವನವಾಸಸ್ವಾದ್ರೂ ಅನುಭವಿಸ್ಬಹುದು…..ಆದ್ರೆ ತನಗಿಂತ ಎತ್ರ, ಯಾಕೆ, ತನ್ನಷ್ಟೇ ಎತ್ರವಿರೋ ಅಥ್ವ ಎತ್ರವಾಗೋ ಹೆಂಡ್ತಿ ಕೈ ಮಾತ್ರ ಹಿಡೀಬಾರ್ದೂ, ಸ್ವಾಮಿ!….ಈ ಜನ್ಮದಲ್ಲಿ ನಾನು ಇನ್ನೂ ಎತ್ರ ಬೆಳೆಯೋ ಹಾಗಿಲ್ಲ; ವಯಸ್ಸಾಯ್ತು. ಮುಂದಿನ ಜನ್ಮದಲ್ಲಾದರೂ ಆ ಭಗವಂತ ನನ್ನ ಮೇಲೆ ಕರುಣೆ ಇಟ್ಟು, ಇಲ್ಲ, ನನಗಿಂತ ಎತ್ರ ಬೆಳೆಯುದ ಹಾಗೆ, ಅದೂ ಅವನಿಗೆ ಅಸಾಧ್ಯವಾದರೆ, ನನಗಿಂತ ಕುಳ್ಳಾದ ಹೆಣ್ಣನ್ನೇ ಕುತ್ತಿಗೆಗೆ ಕಟ್ಟೋ ಹಾಗೆ….ಅಥ್ವ ನಾನೇ ಹೆಣ್ಣಾಗಿ ಜನ್ಮ ತಾಳ್ಬೇಕಾದ್ರೆ ನನ್ನ ಕುತ್ತಿಗೇಲಿ ತಾಳಿ ಬಿಗಿಯೋಕೆ ನನಗಿಂತ ಎತ್ರದ ಗಂಡನ್ನೇ ಒಡಗಿಸಿ ಕೊಡಪ್ಪಾ, ಎಂದು, ಇಕೊ ಅವನನ್ನ ಬೇಡ್ತಿದೇನೆ….ನಾನೇನ್ ಸ್ವಾಮಿ, ಅವಳಿಗೆ ಕಡಿಮೆ ಮಾಡಿರೋದು? ಒಡ್ವೆ ಮಾಡ್ಸಿ ಕೊಟ್ಟಿಲ್ವೆ? ಕೇಳಿದ್ದೀರೆ ಕುಪ್ಸ ತೆಕ್ಕೊಟ್ಟಿಲ್ವೆ? ನಾನೇನ್ ಬೀದಿ ಭಿಕಾರಿಯೆ? ಹೊಲ, ಗದ್ದೆ ಮನೆ ಮಠ, ಊರ್ನೋರಲ್ಲಿ ಒಂದು ಗೌರವ, ಎಲ್ಲಾ ಇದ್ದೂ, ಅವಳು ಸಮಯದಲ್ಲಿ ನನ್ನ ಮಾನ ಕಳೆದ್ಬಿಡ್ತಾಳೆ, ಸ್ವಾಮಿ,….ಕಳೆದ್ಬಿಡ್ತಾಳೆ, ನೋಡಿ, ನಾನು ಕುಳ್ಳಾಗಿ ಹುಟ್ಟಿದ್ದು ನನ್ನ ತಪ್ಪೆ?….ಯಾರಲ್ಹೇಳಿಕೊಳ್ಳಲಿ? ಏನಂತ್ಹೇಳಿಕೊಳ್ಳಲಿ?…."

ಆತ, ಇನ್ನೂ, ಏನೋ, ಎಷ್ಟೋ, ಹೇಳ್ಬೇಕಂತಿದ್ದ. ಅಂತ ಕಾಣುತ್ತೆ. ಆಷ್ಟ್ರೆ ಅವನಿಳಿಯೋ ಸ್ಟೇಷನ್ ಬಂತು. ಸದ್ಯಕ್ಕೆ ನನ್ಗೆ ಬಿಡ್ಗಡೆಯಾಯ್ತು ಅವನಿಂದ….ಆದ್ರೆ….

ಆದ್ರೆ ನನ್ಗೆ ಯೋಚ್ನೆಗಿಟ್ಟುಕೊಂಡ್ತು: ಆ ಪ್ರಾಣಿ ಆ ಗಾಡೀಲಿದ್ದ ಎಲ್ಲಾರ್ನೂ ಬಿಟ್ಟು ನನ್ನೇ ಏಕಾರಿಸ್ಕೊಬೇಕು ಅಂತ. ನಾನೇನೋ ಹೆಚ್ಚು ಎತ್ತರದ ಆಳಲ್ಲ ಅಂತ ಅವರಿವರು ಅನ್ನೋರು, ನಿಜ. ಬಹುಶಃ, ತನಗಾಗೋದೆಲ್ಲ ನನಗೂ ಆಗುತ್ತದೆ, ತನ್ನಂಥವರು ಇನ್ನೂ ಅನೇಕ ಮಂದಿ ಇದಾರೆ, ಆದ್ದರಿಂದಲೇ ತಾನು ಇನ್ನೂ, ಮಾನ ಹೋದರೂ ಪ್ರಾಣ ಇಟ್ಕೊಂಡಿರುವುದು, ಎಂದೆಲ್ಲ ಅವನು ಯೋಚಿಸಿರಬೇಕು. ಹಾಗೆಯೇ, ನನ್ನ ಹೆಂಡ್ತಿ ಒಂದೊಂದ್ಸಾರಿ ನನಗಾಡ್ತಿದ್ದೂ ಜ್ಞಾಪಕಕ್ಕೆ ಬಂತು. ಅವನ್ಹೇಳಿದ್ದೆಲ್ಲ ನಿಜ್ವೇ ಅನ್ನಿ. ಗಂಡಸ್ಸು ಕುಳ್ಳಾಗಿ ಹುಟ್ಬಾರದು. ಹುಟ್ಟಿದ್ರೂ ಆಜನ್ಮ ಬ್ರಹ್ಮಚಾರಿಯೇ ಬಾಳಬೇಕು. ಇಲ್ಲಾ, ಮದ್ವೆಯಾದ್ರೂ, ಒಳ್ಳೇ ಕುಳ್ಳಿಯನ್ನೇ ಮದ್ವೆ ಆಗ್ಬೇಕು, ಅನ್ನಿಸಿತು.

ಹಾಗೆಯೇ ಯೋಚನೆ ಮಾಡ್ತಾ ಗಾಡೀಲಿ ಕುಳಿತಿದ್ದೆ....ರೈಲು ಹತ್ತಿದ ಕೂಡಲೇ ಕೈಲಿದ್ದ ಚೀಲಾನ ಗೂಟಕ್ಕೆ ನೇತ್ಹಾಕ್ಕೊಳ್ಳೋಕ್ಹೋಗಿ, ಆಗದೆ, ಬೇರೊಬ್ಬರ ಸಹಾಯ ಬೇಡಿದ್ದೆ ನಾನು, ಅದರ ನೆನಪಾಯಿತು....ನಾವು ಎತ್ರನಾದ್ರೂ, ಅದನ್ನ ತಿಳಿದೂ ಕೂಡ, ನೀನೆತ್ರಾನೋ ನಿನ್ಹೆಂಡ್ತಿ ಎತ್ರಾನೋ, ನೋಡೋಣಾಂತ, ಬೇಕೆಂತ್ಲೇ ಒಬ್ಬರ ಹತ್ರ ಒಬ್ರನ್ನ ನಿಲ್ಲಿಸಿ, ನನ್ನ ಸೋದರ ಸೊಸೆ ಅವಳ ಗೆಳತಿಯರು ಹಾಸ್ಯಮಾಡಿದ್ದು....ಮುಂಚೇನ್ಹಳ್ಳಿ ಮಿಡ್ಲಿಸ್ಕೂಲ್ ಹೆಡ್ಮಾಸ್ಟರಾಗಿ ನಾನು ವರ್ಗವಾಗಿ ಹೋದಾಗ ಅಲ್ಲಿ ಸಾ|| ತಲ್ಲಂ... ಶೆಟ್ಟರು 'ತಾವೇನೋ ಹೊಸ ಎಡ್ಮೇಸ್ಟರು? ತಮಗಿಂತ ಉದ್ದಕ್ಕಿರೋ ಹುಡುಗರೇ ಫೋರ್ತ್ ಇಯರ್ ಕ್ಲಾಸಿನಲ್ಲಿದಾರಲ್ರಿ? ಅವರೇನ್ಹೋಗ್ರಿ ತಿಡಿ'ತೀರ್ರಿ? ಕೊಂಚ ಮೀಸೇನಾದ್ರೂ ಬಿಡ್ರಿ!" ಎಂದು ಸಲಹೆ ಕೊಟ್ಟದ್ದು....ಅದಕ್ಕೂ ಹಿಂದೆ, ಡ್ಯೂಟಿ ರಿಪೋರ್ಟ್ ಮಾಡ್ಕೊಳ್ಳೋಕೆ ನಾನು ಹೈಸ್ಕೂಲ್ ಆಫೀಸೊಳ್ಗೆ ಹೋಗ್ಬೇಕೂಂತಿದ್ದಾಗ, ಸ್ಕೂಲ್ ಸೇರೋಕೆ ಬಂದ ಹುಡುಗ ಅಂತ ಜವಾನ ನೂಕಿದ್ದು, ಸೀಟಿಲ್ಲ ಅಂತ ಗುಮಾಸ್ತೆ ತಡೆದದ್ದು....ನನ್ನ ಮದ್ವೆ ಸಮಯದಲ್ಲಿ 'ಗಂಡು ಹೆಣ್ಣು ಅಂದ್ರೆ ವರಸಾಮ್ಯ ಹೀಗಿರಬೇಕು; ಈಗಿನ ಕಾಲ್ದ ಗಂಡು ಹೆಣ್ಣುಗಳು ಬೆಳ್ದು ಕಟ್ರ ಹಾಗಿರುತ್ತವೆ; ಬೊಂಬೆ ಜೊತೆ ಹಾಗೆ ಇರೋ ಈ ಪುಟ್ಟ ಗಂಡು-ಹೆಣ್ಣು ನೋಡೋಕೆ ಎರಡು ಕಣ್ಣು ಸಾಲ್ದು' ಅಂತ ಅಂದದ್ದು....ವಿದ್ಯಾರ್ಥಿಯಾಗಿದ್ದಾಗ 'ಲೋ ಚಿಕ್ಕ', 'ಇರ್ವೆ', 'ಚಿಲ್ಟೇರಿ', ಗುಬ್ಬಚ್ಚಿ', 'ಜಪಾನ್ ಜಯಂಟ್', 'ಕುಳ್ಳಾರಿ', 'ಕಡ್ಲೇ ಗಿಡಕ್ಕೆ ಏಣಿ ಹಾಕೋನೆ'. 'ಕಳ್ಳನ್ನಂಬಿದ್ರೂ ಈ ಕುಳ್ಳನ್ನಂಬೇಡ', 'ಮೊಂಡ್ಗುದ್ಲಿ', 'ಮೋಟ್ಮರ', ಎಂದು ಐಗಳೂ ಹೈಕಳೂ ಗೇಲೀ ಮಾಡಿದ್ದು....ನನ್ನನ್ನ ನಮ್ಮಮ್ಮ ಹೆತ್ತಾಗ, 'ಎಲ್ಲೇ? ಮಗೂನೇ ಕಾಣೋಲ್ಲ, ಕಣ್ಣಿಗೆ!' ಅಂತ, ಬಂದ ಮುತ್ತೈದೆ ಅಂದಿದ್ದು, ಅದಕ್ಕೆ ಮತ್ತೊಬ್ಳು, 'ಅಯ್ಯೋ! ಮಗು ತುಂಬಾ ಪೀಚು!' ಅಂದಿದ್ದು, ಅದಕ್ಕಮ್ಮಮ್ಮ ನಾಚಿಕೆಪಟ್ಟು ಸೆರಗಿನಿಂದ ಮುಖಮುಚ್ಚಿಕೊಂಡು, "ಹೌದು! ಸ್ವಲ್ಪ ಅವರ್ಹಾಗೆ" ಅಂತ ಉತ್ತರ ಹೇಳಿದ್ದರು ಅಂತ ಯಾರೋ ನನಗೆ ವರದಿ ಮಾಡಿದ್ದು....ಎಲ್ಲವೂ ಒಂದೊಂದಾಗಿ....ಸಿನಿಮ ಚಿತ್ರದಂತೆ ಮನದ ಮುಂದೆ ಹಾದ್ಹೋಗಿ. ಗೇಣುದ್ದದ ದೇಹ (ಆಳುದ್ದದ್ದು ಅಂತ ಹೇಗ್ತಾನೆ ಹೇಳ್ಕೊಳ್ಳಲಿ ನಾನು?) ಜೋಟುದ್ದಾಗಿ, ಸಂಕಟದ ಬಿಸಿ ಎರಡ್ಹನಿ ಕಣ್ಣಿಂದ ಉರುಳ್ತು.

— ಹೇನು.

—— o ——

ರಸ್ತೆಯಲ್ಲಿ ಬಿದ್ದಿದ್ದ ಒಂದು ಕಾಗದ

ರಾಮಣ್ಣನ ತಮ್ಮ ತಿಮ್ಮನಿಗೆ, ನಾನು ಬರೆದದ್ದು. ಇದನ್ನ ಯಾರಿಗೂ ತೋರಿಸಬೇಡ.

ಹಳ್ಳಿ ಜೀವನ ಬೇಜಾರಾಗಿ ನೀನೂ ಬೆಂಗಳೂರಿಗೇನೇ ಬಂದುಬಿಡುತ್ತೇನೆ ಅಂತ ಬರೆದಿದೆಯಲ್ಲಾ; ಯೋಚನೆ ಏನೋ ಒಳ್ಳೇದೇನೆ. ಆದರೆ, ನನ್ನಂಗೆ ನೀನೂನೂ ಸ್ಕೂಲು ಗಿಲ್ಲು ಸೇರಬೇಡ. ಅಲ್ಲಿ ಸುಖ ಅನ್ನೋದು ಕಡಮೆ. ಶಿಲ್ಪಿ ಹೊಡೆಯುತ್ತಲೂ ದೌಡಾಯಿಸ್ಕೊಂಡು ಒಳಕ್ಕೆ ನುಗ್ಗಬೇಕು; ಗಂಟೆಗಟ್ಟಲೆ ಒಂದೇ ಚಾಕರೀನ ಮಾಡ್ತಾ ಇರ್ಬೇಕು. ಸಂಜೆ ಆಗುತ್ತಲೂ ಉಸ್ಸಪ್ಪ ಅಂತ ಹೊರಗ್ಬಂದ್ರೆ, ಯಾರು ಯಾರೋ ನಮ್ಮನ್ನ ಹಿಡಿದು ಕೂರಿಸಿ ಲೆಕ್ಚರ್ ಮಾಡ್ತಾರೆ. ಅದಕ್ಕೆಲ್ಲ ಹೂ ಅನ್ನಬೇಕು; ಚಪ್ಪಾಳೆ ಹೊಡೆದು ಹೊಡೆದು ಕೈ ಎಲ್ಲ ಕೆಂಚಗಾಗುತ್ತದೆ.

ಆದರೆ, ನಿನಗೆ ನಾನು ಬೇರೆ ಜೀವನದ ದಾರಿ ತೋರಿಸುತ್ತೇನೆ. ದಿನವೊಂದಕ್ಕೆ ಮೂರು ನಾಲ್ಕು ರೂಪಾಯಿ ಸುಲಭವಲ್ಲೇ ಸಂಪಾದಿಸಬಹುದು. ಸಣ್ಣಗಂಟಿನ ಬಂಡವಾಳ ಇದ್ದರೆ, ಸಾಕು. ಖುಷಿಯಿದ್ದರೆ, ದುಡಿ; ಇಲ್ಲದಿದ್ದರೆ, ಮನೇಲೇ ಕಾಲು ಚಾಚಿಕೊಂಡು ಬಿದ್ದಿರು. ಏಳು ಅಂತ ಹೇಳೋ ಛಾತಿ ಒಬ್ಬನಿಗೂ ಇರೋದಿಲ್ಲ.

ದಾರಿ ಏನು ಅಂತೀಯೋ? ನಿಗ ಇಟ್ಟು ಕೇಳು, ಹೇಳ್ತೇನೆ. ಇಲ್ಲೆಲ್ಲ ನಮ್ಮೂರ್ಹಂಗಲ್ಲ. ಜೋಟುದ್ದದ ದೂರ ಹೋಗಬೇಕಾದರೂನೂ ಈ ಷಹರು ಮಂದಿ ಬಸ್ಸಿಗೆ ಕಾಯುತ್ತಾರೆ; ಅದೊಂದು ಮೋಜು; ನಮ್ಮ ಹಳ್ಳೀಲಿರೋ ಮಾರಮ್ಮನ ಗುಡಿಯಿಂದ ಹನುಮಂತ್ರಾಯನ ಮಂಟಪದ ತಾವಿಗೆ, ಇವರು ಮೂರಾಣೆ ಕೊಡ್ತಾರೆ, ನೋಡ್ಕೊ. ಶುದ್ಧ ದಡ್ಡ ಮಂದಿ. ಕಾಸೂ ನಷ್ಟ, ಮೈಗೂ ಜಡ್ಡು, ಆಸ್ಪತ್ರೆಗಳೆಲ್ಲ ಭರ್ತಿ; ಹೊಟ್ಟೆಯೋ ಗುಡಾಣ; ಬೊಜ್ಜು ಬಿಂ ಅಂತ ಬೆಳೆಯುತ್ತದೆ, ಕಾಲಾಡಿಸದೆ ಬಸ್ಸು, ಕಾರು, ಜಟಕಾ ಅಂತ ಕೂತು ಕೂತು.

ಓ! 'ಕೂತು ಕೂತು,' ಅಂದದ್ದೇ ತಪ್ಪು. 'ನಿಂತು, ನಿಂತು.' ಅಂತ ಹೇಳಬೇಕಾಗಿತ್ತು ನಾನು. ಯಾಕಂತೀಯೋ? ಈ ದಡ್ಡ ಮಂದಿ ಒಬ್ಬರ ಹಿಂದೊಬ್ಬರು ಹಿಂದಿನವನ ಬೀಡಿ ಹೊಗೆ ಕುಡಿಯುತ್ತಾ ಬಿಸಿಲು, ಮಳೆ, ಕಾಗೆ

ಹಿಕ್ಕೆ, ಕೋತಿ ಎಂಜಲು, ನೆಲದ ಕೆಸರು, ತಿರುಕರ ಪಿಡುಗು—ಒಂದನ್ನೂ ಲೆಕ್ಕಮಾಡದೆ, ಗಂಟೆಗಟ್ಟಲೆ ಕಂಬ ನೆಟ್ಟಹಾಗೆ ನಿಂತಿರುತ್ತಾರೆ, ಬಸ್ಸಿಗಾಗಿ ಕಾದು ಕಾದು. ನಿಂತಿರೋ ಟೇಮಿನಲ್ಲಿ ಪುಸಕ್ ಅಂತ ನಾಲ್ಕೆಜ್ಜೆ ಇಟ್ರೆ ಸಾಕು, ಮನೆ ಬ್ಲಾಕಿಗೆ ಛಂಗ್ ಅಂತ ನೆಗೆದುಬಿಡಬಹುದು....ಮುದುಕರು ಮೋಟರು ಅಂದ್ರೆ ಅದೊಂದು ತರ ಹಾಸ್ಯ ಒಳ್ಳೇ ಪ್ರಾಯದೋರು, ನನ್ನಂಥವರು, ನಿನ್ನಂಥವರು, ನಮ್ಮ ಎದುರು ಹಟ್ಟಿ ಪೈಲ್ವಾನ್ ರಂಗಪ್ಪ ಇಲ್ವಾ ಅವನಂಥವರು—ಸಬ್ ಇಸಮುಗಳೂ ಹೀಗೆ ಈಚೆ ಬೀದಿಯಿಂದ ಆಚೆ ಬೀದಿಗೆ ನಡೀಲಾರದೆ, ಬಾಲಾಂಗೂಚ್ಚಿ ನಿಂತಂಗೆ ನಿಂತಿರುತ್ತಾರೆ....ನೋಡಿದರೆ ನಗು ಬರುತ್ತೆ.

ಹೋಗಲಿ, ಅವರ ಸುದ್ದಿ ನಮಗೇಕೀಗ. ನಿನ್ನ ಹೊಟ್ಟೆಪಾಡಿನ ಉಪಾಯ ತಾನೆ ನಮಗೆ ಬೇಕೀಗ? ಮಂಡಿ ನೋವಿಗೆ ಔಷಧಿ ಅಂತ ನಾಲ್ಕು ಸೀಸೆ ಎಂಥದೋ ಒಂದು ಮುಲಾಮು. ತಲೆ ತಿರುಗದೆ ಇರೋದಕ್ಕೆ ನಾಲ್ಕು ಗುಳಿಗೆ, ಕೈಲಿ ಹಿಡ್ಕೊಂಡು ಈ ಕ್ಯೂ ಕಡೆ ಹೊರಟುಬಿಡು. ಒಳ್ಳೇ ಗಿರಾಕಿ, ಒಳ್ಳೇ ಲಾಭ. ರೇಷನ್ ಅಂಗ್ಡಿ, ಬೈಸ್ಕೋಪ್ ಸ್ಟೋರ್ಸ್, ಎಲ್ಲ ಕಡೇನೂ ಗಿರಾಕಿ ಉಂಟು.

ಹಾಗೇನೇ ನಾಲ್ಕು 'ಮಡಿಸೋ ಕುರ್ಚಿ' ಹಿಡ್ಕೊ. ಕಾಲು ಸೋತು ಕುಸಿಯುವವರಿಗೆ ಬಾಡಿಗೆಗೆ ಕೊಡು. ಗಂಟೆಗೆಂಟಾಣೆ ಅನ್ನು. ಒಳ್ಳೇ ಸಂಪಾದನೆಯಾಗ್ತದೆ. ನಾಲ್ಕೋ ಆರೋ ಛತ್ರಿ ಹಿಡ್ಕೊಂಡು ಹೊರಡು, ಕ್ಯೂ ನಿಂತಿರೋ ಕಡೆ. ಬಿಸಿಲಿಗೆ ಹಿಡಿಯೋಕೆ ಕೊಟ್ಟರೆ ಗಂಟೆಗೊಂದಾಣೆ, ಮಳೆಗಾದರೆ ನಾಲ್ಕಾಣೆ. ಅನ್ನು. ಕೊಡ್ತಾರೆ, ಈ ಸೋಮಾರಿ ಜನ. ಅಷ್ಟೂ ತೆತ್ತು, ಕಾಯುತ್ತಿರುತ್ತಾರೆ ತಮ್ಮ ಸರದಿಗೆ....ಅಂಥ ಹಟವಾದಿಗಳು.

ನೀನು ದೀಪಾಳಿ ಹಬ್ಬ ಮುಗಿಸಿಕೊಂಡ ತಕ್ಷಣ ಹೊರಟು ಬಾ; ನನ್ನ ಮಾತನ್ನು ನಂಬು. ದೇವರಿದಾನೆ. ದಿನಕ್ಕೆ ಮೂರು ರೂಪಾಯಿ ಬರುತ್ತೆ, ಅನುಮಾನವೇ ಇಲ್ಲ. ಹೆಚ್ಚು ತಿರುಗಾಡಬೇಕಾಗಿಯೇ ಇಲ್ಲ—ನಿನ್ನೊಬ್ಬನ ಕೈಯಲ್ಲಿ ನಿಭಾಯಿಸೋಕಾಗದೆ ಹೋದರೆ, ಬೋನಸ್ ಕೊಟ್ಟು ಮುಗಿಯುತ್ತಲೂ, ನಾನು ಈ ನೌಕರೀನ ಕಿತ್ತೊಗೆದು ಹಾಯಾಗಿ ನಿನ್ನ ಜೊತೆ ಪಾಲಿಗೆ ಬರ್ತೀನೆ.

ನನ್ನ ಈ ಉಪಾಯಾನ ಊರಲ್ಲಿ ಯಾರಕಿವಿಗೂ ಹಾಕಬೇಡ. ಗುಟ್ಟಾಗಿ ಮಡಗಿರು. ಯಾವತ್ತು ಬರ್ತೀಯಾ ಅಂತ ಬಸ್ಸವನ ಹತ್ತರ ಹೇಳಿಕಳುಹಿಸು

ಅಕ್ಕನ ಮಗುವಿಗೆ ರಬ್ಬರ್ ಷೂಸ್ ಕಳಿಸಿದ್ದೆ. ಹಳ್ಳಿ ಹೈದ; ಅದನ್ನ ಹಾಕಿಕೊಂಡು ಎಡವಿಬಿದ್ದಾನು. ಬಿಸಿ ಎತ್ತಿಕೊಂಡೇ ತಿರುಗಾಡು.


—ರಾಮಣ್ಣ.

ಗಂಡನಾದ ಗಂಡು

ಎಷ್ಟು ವರ್ಷಗಳಿಂದ ನಾನು
ಕಷ್ಟ ಕೊಟ್ಟೆ, ಹೆತ್ತವರಿಗೆ !
ಇಷ್ಟಮಿತ್ರ ನೆರೆಯರಿಗೆ,
ಎಷ್ಟು ಬಗೆಯ ಕಿರುಕುಳ !

ಅರಚಿ ಕಿರಿಚಿ ಅತ್ತು ಪರಚಿ
ಬರದೆ, ಬರಿದೆ ಕಾಟ ಕೊಟ್ಟು
ಕಾಲ ಹಿಡಿದು ಟಾಂಗಕೊಟ್ಟು
ಲಾಗ ಹಾಕಿ ಮೂಗ ಪೆಟ್ಟು
ಪೋಲಿ ಗೂಳಿ ಪೋರ ಎನಿಸಿ....

ಅಯ್ಯೋ ! ಈಗ, ನನ್ನ ಪಾಡು !
ಬಾಳಿದೆಲ್ಲ ಕಡೆಗೆ ಇದಕೆ ?
ಕೈಯ ಹಿಡಿದರಿಂದೇ ಬೇಕೆ ?
ಮೂಕ ಬಾಳು, ಕುರಿಯ ಬದುಕೆ ?



ಕ್ರಾಸು

ಲಾಯರು :—ಪ್ರತಿವಾದಿ ನಿಮ್ಮನ್ನು ಎಲ್ಲಿ ಸಂಧಿಸಿದ ?

ವಾದಿ :—ಲಾಂದ್ರದ ಕಂಬದಡಿಯಲ್ಲಿ.

ಲಾಯರು :—ಅವನು ನಿಮ್ಮನ್ನು ಏನು ಮಾಡಿದ ?

ವಾದಿ :—ಬೈದ.

ಲಾಯರು :—ಏನೆಂದು ಬೈದ ?

ವಾದಿ :—ಹಾಳಾಗಿ ಹೋಗು, ಅಂದ.

ಲಾಯರು :—ಆಮೇಲೇನಾಯಿತು ?


ವಾದಿ :—ಮತ್ತೆ, ಬೈದ.

ಲಾಯರು :—ಏನೆಂದು ಬೈದ ?

ವಾದಿ :—ನಿನ್ನ ಮನೆ ಮಣ್ಣಾಗಲಿ, ಅಂದ.

ಲಾಯರು :—ಆಗ, ನೀವೇನು ಮಾಡಿದಿರಿ ?

ವಾದಿ :—ನೆಟ್ಟಗೆ ನಿಮ್ಮ ಆಫೀಸಿಗೆ ಬಂದೆ, ಸ್ವಾಮಿ.



ಕಾಡು ಸುದ್ದಿ

ಕೋತಿಗಳನ್ನು ಕೊಲ್ಲಬಹುದೆ?—ಎಂಬ ಸಮಸ್ಯೆ ಈಗ ನಮ್ಮ ದೇಶದ ನಾಯಕರ ತಲೆ ತಿನ್ನುತ್ತಿದೆಯಲ್ಲವೆ? ಇದು ಪ್ರಜಾ ಸತ್ತಾತ್ಮಕ ಯುಗ; ಆದ್ದರಿಂದ, ಕೋತಿ ಸತ್ತಾತ್ಮಕವೂ ಹೌದು. ಕೋತಿಗಳನ್ನು ಕೇಳದೆ, ಅವರ ಅಭಿಮತವನ್ನು ವಿಚಾರಿಸದೆ, ಅವರಲ್ಲಿ ಬಹು ಸಂಖ್ಯಾತರ ಅಭಿಪ್ರಾಯವನ್ನು ತಿಳಿಯುವ ತನಕ ನಾವು ಚರ್ಚೆಯನ್ನು ಮುಂದುವರಿಸುವುದೇ ಅನ್ಯಾಯ, ಅನುಚಿತ.

ಆದ್ದರಿಂದ ನಾನು ಕೋತಿಗಳನ್ನು ವಿಚಾರಿಸಿದೆ. ಕೋತಿಗಳ ನಾಯಕರೆಲ್ಲರೂ, ಕಾಡನ್ನು ಬಿಟ್ಟು ನಾಡಿಗೆ ನುಗ್ಗಿರುವ ಕಪಿಗಳನ್ನು ಕೊಲ್ಲಬಹುದು, ಎಂಬ ಅಭಿಮತವರಾಗಿದಾರೆ, ಎಂದು ನಾನು ಕಂಠಾಘೋಷವಾಗಿ ಹೇಳಬಲ್ಲೆ. ಅದಕ್ಕೆ ಅವರು ಕೊಡುವ ಕಾರಣಗಳು ಸಮಂಜಸವಾಗಿಯೂ, ಸ್ವಾರಸ್ಯವಾಗಿಯೂ ಇವೆ.

೧) ಸ್ವದೇಶಾಭಿಮಾನವಿಲ್ಲದೆ ಪರರಾಷ್ಟ್ರಗಳಿಗೆ ಹೋಗಿ, ಅಲ್ಲಿ ವಾಸ ಮಾಡಲಿಚ್ಛಿಸುವವರನ್ನು ಮಲಾನ್ ಸರ್ಕಾರ, ಸಿಲೋನ್ ಸರ್ಕಾರ, ಪಾಕಿಸ್ಥಾನ ಮುಂತಾದ ಆಧುನಿಕ ನಾಗರಿಕ ನರ ರಾಷ್ಟ್ರಗಳು ಹಿಂಸೆಗೆ ಗುರಿಮಾಡುವುದಿಲ್ಲವೆ? ಕಬ್ಬಿಣದ ಯವನಿಕೆಯಿಂದಾಚೆ ಒಂದು ಪಿಳ್ಳೆಯೂ ಕಾಲಿಡಬಾರದೆಂದು ರಷ್ಯಾ ಆಜ್ಞೆಮಾಡಿಲ್ಲವೆ? ಅಂತೆಯೇ. ಕೋತಿಗಳಲ್ಲೂ ಒಂದು ಸುಗ್ರೀವಾಜ್ಞೆ ಇದೆ. ಅದನ್ನು ಮೀರಿದವರಿಗೆ ಮರಣ ದಂಡನೆಯೇ ಆತನ ಆಜ್ಞೆ.

೨) ಸನಾತನಿಗಳಾದ ಕೋತಿಗಳು ಹಲವು, ನಗರಗಳಿಗೆ ನುಗ್ಗಿ ಮಿಠಾಯಿ ವಗೈರೆಗಳನ್ನು ತಿನ್ನುವ ಕಪಿಗಳನ್ನೂ, ಮೃಗಾಲಯದ ಬೋನೊಳಗೆ ಕೂತು ಸಿಗರೇಟ್ ವಗೈರೆಗಳನ್ನು ಸೇವಿಸುವ ಕಪಿಗಳನ್ನೂ, ಕಂದಮೂಲಾದಿಗಳನ್ನು ಸವಿದು ಕೇವಲ ತಾಪಸ ವಾತಾವರಣವನ್ನು ತ್ಯಜಿಸಿ, ಆಹಾರ ವ್ಯವಹಾರಗಳಲ್ಲಿ ನರಮನುಷ್ಯರನ್ನ ಹೂಂಕರಿಸಿ ಪತಿತರಾದ ಕಪಿಗಳನ್ನೂ, ವಧಾರ್ಹರೆಂದು ಈಗಲೇ ಘೋಷಿಸಿವೆಯಂತೆ.

೩) ಆಂಜನೇಯನ ವಂಶಜರೆಂದೂ. ರಾಮನ ಸಹಾಯಕರೆಂದೂ ಈಗಿನ ಕಪಿಗಳನ್ನು ಹೇಳುವುದೂ, ತದ್ರೀತ್ಯಾ ಪೂಜಿಸುವುದೂ, ಕೇವಲ ದಡ್ಡತನವೆಂದು ಕೋತಿಗಳೇ ಹೇಳಿದುವು. ಏಕೆಂದರೆ, ಈಗಿನ ಕಪಿಗಳು ನರರಾಕ್ಷಸರನ್ನೆದುರಿಸಲು ಅಶಕ್ತರು; ಮುನಿಸಿಪಲ್ ಜವಾನರ ಬೋನಿಗೆ ಸುಲಭದಲ್ಲೇ ಸಿಕ್ಕಿಬೀಳುವ ಅಬ್ಬೇಪಾರಿಗಳು; ಕಡಲೆಕಾಯಿಗೆ ಕೈ ನೀಡಿ ಹಲ್ಲು ಕಿರಿಯುವ ಕುಮತಿಗಳು; ಬಾಸುಂಡೆ ಬಿದ್ದರೂ ಬಾಲವಾಡಿಸುವ ಜೀಕೂಫರು—ಇಂಥವರಿಂದ, ಹಿಂದಿನ ಕಪಿಕುಲಲಲಾಮರಿಗೆ ಅಪಮಾನವೇ ಹೊರತು ಬೇರೆ ಇಲ್ಲ—ಇಂಥವರ ಸಂಖ್ಯೆ ಕಡಿಮೆಯಾದಷ್ಟು ಕೀರ್ತಿ—ಎಂದು ಕೋತಿ ನಾಯಕನೊಬ್ಬ ಆಕ್ರೋಶಪೂರಿತವಾಗಿ ಹೇಳಿಕೆ ಕೊಟ್ಟ.

೪) ಮನುಷ್ಯನಂತೆ ಮುಖ. ಮನುಷ್ಯನಂತೆ ಕೈಕಾಲು, ಮನುಷ್ಯನಂತೆ ಕುಟುಂಬ ಜೀವನ ಇತ್ಯಾದಿ ಸಂಪಾದಿಸಿಕೊಂಡು ಮೆರೆಯುತ್ತಿರುವ ಕೋತಿಗಳು, ಮನುಷ್ಯನಂತೆಯೇ ಏಕೆ ನಾಶವಾಗಬಾರದು?- ಎಂದು ಪ್ರಗತಿಪ್ರಿಯ ಕೋತಿ ನಾಯಕನೊಬ್ಬ ಹೂಂಕರಿಸಿದ. "ನಾವು ನಿಮ್ಮವರು; ನೀವು ಇನ್ನೇನು ಒಂದು ಮಹಾಯುದ್ಧ ಹೂಡಿ ಬಾಂಬುಗಳನ್ನು ಚೆಂಡಾಡಿ ಸಂಪೂರ್ಣವಾಗಿ ನಾಶವಾಗಲು ಸಂಕಲ್ಪ ಮಾಡಿದೀರಿ. ನೀವಿಲ್ಲದ ಲೋಕದಲ್ಲಿ ನಾವು ಬಾಳುವುದೆಂತು. ನರನಾಗಿ ಅವತಾರಮಾಡಿದ ರಾಮನಿಗೆ ನಾವು ನೆರವಾದವು. ನಿಮ್ಮ ನಾಳೆಯ ನರಮೇಧದಲ್ಲಿ ನಾವು ನಿಮಗೆ ಸಹಾಯಮಾಡುವುದಸಾಧ್ಯ. ಬಂಡೆ, ಮರ, ಹಲ್ಲು, ಉಗುರು, ಇವು ಇಂದಿನ ಆಯುಧಗಳಲ್ಲ—ಆದ್ದರಿಂದ, ನೀವೆಲ್ಲ ಅಣುಬೆಂಕಿಗೆ ಬಿದ್ದು ಪಂಚಭೂತಗಳಲ್ಲಿ ಲೀನವಾಗುವ ಮೊದಲು, ಕೃಪೆಯಿಟ್ಟು ನಮ್ಮನ್ನು ಕೊಂದುಬಿಡಿ"—ಎಂದು ಒಬ್ಬ ಮಹಾನುಭಾವ ಕಪಿ ಕನಿಕರದಿಂದ ಕೇಳಿಕೊಂಡಿತು.

೫) ಏಕಪತ್ನೀ ವ್ರತಸ್ಥರಾದ ನಗರದಲ್ಲೇ ಜನಸಂಖ್ಯೆ ಅಪರಿಮಿತವಾಗಿ ಹೆಚ್ಚುತ್ತಿದೆ ಎಂದು ನೀವು ಗಾಬರಿಯಾಗಿದೀರಿ, ಎಂದ ಮೇಲೆ, ಬಹುಪತ್ನೀ ಪದ್ಧತಿ, ಸ್ವೇಚ್ಛಾವಿಹಾರ, ಶಾಖೋಪಶಾಖೆ ಇತ್ಯಾದಿ ಸಡಿಲ ಜೀವನ ನಡೆಸುತ್ತಿರುವ ನಮ್ಮಲ್ಲಿ ಕೇಳಬೇಕೆ? ನೀವು ಯುದ್ಧ, ಕರೀಪೇಟೆ, ವೈದ್ಯಶಾಸ್ತ್ರ, ವಿಮಾನ ಸಂಚಾರ, ರೈಲು, ಲಾರಿ ಇತ್ಯಾದಿಗಳಿಂದ ಜನಸಂಖ್ಯೆಯನ್ನು ತಗ್ಗಿಸುತ್ತೀರಿ. ನಮ್ಮಲ್ಲಿ ಯುದ್ಧವಿಲ್ಲ; ಮೋಟಾರುಗಳಿಲ್ಲ; ಅಂತಃಕಲಹಗಳಿಲ್ಲ—ಆದ್ದರಿಂದ, ನಿಮ್ಮ ಬಂದೂಕು ವಿಷಾನ್ನ ಇವೇ ನಮಗೆ ಶರಣು, ಸಂಖ್ಯೆ ಕಡಿಮೆಯಾಗಲು. ದಯವಿಟ್ಟು ನಿಮ್ಮಲ್ಲಿನ ಚರ್ಚೆಯನ್ನು ನಿಲ್ಲಿಸಿ ಕಾರ್ಯೋನ್ಮುಖರಾಗಿ—ಎಂದು ಅರ್ಥಶಾಸ್ತ್ರ ಬಲ್ಲ ಕೋತಿ ಒಂದು ಹೇಳಿತು.

೬) ಕಪಿಗಳನ್ನು ಸೀಳಿ ಅವುಗಳೊಳಗಿಂದ ಯಾವುದೋ ಗ್ರಂಥಿಯನ್ನು ತೆಗೆದು ನರದೇಹಕ್ಕೆ ಸೇರಿಸಿ ನವಯೌವನ ಪಡೆಯಬಹುದು, ಕರೀ ಕೋತಿ ಲೇಹ ಎಂಬ ಒಂದು ವೈದ್ಯಕೀಯ ಪದಾರ್ಥದಿಂದ ಒಂದು ತರಹದ ರೋಗ ವಾಸಿಯಾಗುತ್ತದೆ, ಎಂದೆಲ್ಲ ಸಮಾಚಾರ ಕೇಳಿ ಕೋತಿಗಳ ಗುಂಪಿನಲ್ಲಿ, ಅದರಲ್ಲೂ ತ್ಯಾಗ ಜೀವಿಗಳಾದ ಮಹಾ ವಾನರುಗಳಲ್ಲಿ, ನರಸೇವೆಗಾಗಿ ಜೀವ ದಾನಮಾಡಬೇಕೆಂಬ ಅಭಿಲಾಷೆ ಹೆಚ್ಚಿದೆ. ಆದಕ್ಕಾಗಿಯೇ ಆಸಕ್ತಿವಂತರಾದ ಕಪಿಗಳು ಗ್ರಾಮಗಳಿಗೆ ನುಗ್ಗಿ ಕೀಟಲೆ ಎಬ್ಬಿಸಿ, ವಧೆಯನ್ನು ಸ್ವಾಗತಿಸುತ್ತಿರುವುವು, ಎಂಬ ಸುದ್ಧಿಯನ್ನೂ ನಾನು ಕೋತಿಗಳಿಂದ ತಿಳಿದುಕೊಂಡೆ.

ಒಟ್ಟಿನಲ್ಲಿ ಕೋತಿಲೋಕ ಕೋತಿಗಳ ಕೊಲೆಗೆ ವಿರೋಧವಾಗಿಲ್ಲ ಎಂಬುದು ನನಗೇನೋ ಸ್ಪಷ್ಟ.

—ವಿದ್ಯಾರಣ್ಯ.

———o———

ಸುಖ, ದುಃಖ, ಎಂಬ ಭೇದ
ತಕ್ಕುದಲ್ಲ ; ಎರಡೂ ಮಿಥ್ಯೆ
ಎನ್ನುತ್ತಿದ್ದ ಮಾಯವಾದಿ
ಕೂತ ಒಂದು ಮೊಳೆಯಮೇಲೆ !

ತಿಂದ !
ಅಂದ—

"ಇದುವರೆವಿಗೆ ತೋರುತಿದ್ದ
ಸುಖದ ಮಿಥ್ಯೆಗಿಂತ ಈ
ದುಃಖ, ಕಡಮೆ ಮಿಥ್ಯವು."

ದಸರಾ ದೃಶ್ಯಗಳು

ಒಂದು ಭಾವಿ. ನೀರಿಲ್ಲದ ದೊಡ್ಡ ಭಾವಿ. ತಳದಿಂದ ಮೇಲಕ್ಕೆ ಇಬ್ಬರು ಎದೆಗಾರಿಕೆಯುವರು ಬೈಸಿಕಲ್ ಹತ್ತಿ ಸುತ್ತುತ್ತಾರೆ. ಬನ್ನಿ ನೋಡಿ, ಎಂದು ಒಂದೇ ಸಮನೆ ಅರಣ್ಯರೋದನ ನಡೆಯುತ್ತಿತ್ತು. ನಾನು ಅದಕ್ಕೆ ಮಾರ್ದನಿ ಕೊಟ್ಟು ಹೋಗಿ ನೋಡಿದೆ.

ಮೊದಲೆಲ್ಲಾ ಮೋಟಾರ್ ಸೈಕಲ್ ಮೇಲೆ ಈ ರೀತಿ ಸವಾರಿ ಮಾಡುತ್ತಿದ್ದರು. ಸಾವಿರ ಕಾಲು ಗೋಡೆ ಮೇಲೆ ಸರಿದು ಹೋದ ಹಾಗೆ ಸರ್ರಂತ ಸವಾರಿ ಮಾಡ್ತಿದ್ದರು. ನೋಡುತ್ತಿದ್ದ ನಮಗೆ ಎದೆ ಕೈಕಾಲೆಲ್ಲಾ ಢಡ ಢಡ ಅನ್ನುತ್ತಿತ್ತು. ಈಗ ಬರೀ ಬೈಸಿಕಲ್ಲಿನಲ್ಲೇ ಆ ರೀತಿ ಸವಾರಿಮಾಡುತ್ತಿದ್ದರು.

ಅಂದ ಮೇಲೆ ಮುಂದಿನ ವರ್ಷ ಯಾರೋ ಇಬ್ಬರು ಬಂದು ಓಡ್ತಾ ಓಡ್ತಾ ಇದೇ ರೀತಿ ಗೋಡೆ ಮೇಲೆ ಹಾವೂ ಚೇಳೂ ಹರಿದಹಾಗೆ ಓಡಾಡುತ್ತಾರೋ ನೋಡಬೇಕು. ಅದೊಂದು ಕಲಿತರೆ ಕಳ್ಳರಿಗೆ ಎಷ್ಟು ಸುಖ ಎನ್ನಿಸಿತು.

*   *   *

ಕಲಾ ಪ್ರದರ್ಶನ. ಜೇಬಿನ ಮೇಲೆ ಒಂದು ಅಂಗೈ ಭದ್ರವಾಗಿ ಅದುಮಿ ಜೀವ ಇನ್ನೊಂದು ಕೈಯಲ್ಲಿ ಹಿಡಿದು, ಇನ್ನೊಬ್ಬರ ಕಾಲ ಮೇಲೇ ನಡೆದು ನಡೆದೂ, ಕಲಾಪ್ರದರ್ಶನಕ್ಕೆ ಹೋದೆ. ಯಾವಾಗಲೂ ನನಗೆ ಒಂದು ಹುಚ್ಚು. ಈ ಚಿತ್ರಗಳನ್ನು ನೋಡಿ ತೀರ್ಪುಕೊಡುತ್ತಾರಲ್ಲಾ! ಅವರ ಮೇಲಿನ ತೀರ್ಪನ್ನೇ ಬಂದವರು ಕೊಡೋದು, ಈ ತರಹ ತೀರ್ಪನ್ನು ಕೇಳಬೇಕು ಎನ್ನೋದೆ ಆ ಹುಚ್ಚು.

"ನೋಡಯ್ಯಾ! ದೇವರೇಗತಿ. ಮುಂದಿನ ವರ್ಷ ನನಗೆ ಯಾವ ಕೆಟ್ಟ ಕನಸು ಬೀಳುತ್ತೋ ಇದನ್ನೇ ನಾನು ಚಿತ್ರಿಸಿ ಕಳಿಸುತ್ತೇನೆ ಅದಕ್ಕೂ ಬಹುಮಾನ ಸಿದ್ಧ"

"ಯಾಕ್ರೀ, ತೀರ್ಪುಗಾರರಿಗೆ ವೈದ್ಯ ಪರೀಕ್ಷೆ ಮೊದಲು ಮಾಡಿಸಬೇಕು. ಕೆಲವರಿಗೆ ಕೆಲವು ವರ್ಣಗಳು ಕಾಣಿಸುವುದೇ ಇಲ್ಲವಂತೆ. ಹಾಗೆ ತಿಳಿಯದೂ ಅಂತಲೂ ತಿಳಿಯದಂತೆ. ಆದುದರಿಂದಲೇ ಈ ತೀರ್ಪುಗಳು."

"ಈ ಬಹುಮಾನದ ಚಿತ್ರವನ್ನು ಹೋಟಲ ಊಟದ ಮನೇಲಿ ಹಾಕ ಬೇಕಯ್ಯಾ! ಸಾವಿರ ರೂಪಾಯಿ ಕೊಟ್ಟರೂ ಚಿಂತೆಯಿಲ್ಲ—ಈ ಶೈಲ ಚಿತ್ರ ನೋಡಿದರೆ ಯಾರಿಗೂ ಅನ್ನ ಸೇರುಲ್ಲ—ಬಲು ಲಾಭ ಹೋಟಲಿನವನಿಗೆ—"

ಈ ರೀತಿ ಮಾತನಾಡುತ್ತಿದ್ದ ಟೀಕಾಕಾರರೆಲ್ಲಾ—ಕೆಂಪು ಷರಟು. ಬೋಳಿಸದ ಗಡ್ಡ, ಕರೀ ಇಜಾರ, ಇತ್ಯಾದಿ ಅಲಂಕೃತ ನವಯುವಕರೇ ಆಗಿದ್ದರು.

ಆದರೆ— ಆದರೆ— ಆದರೆ.

ಆ ಗಂಧದ ಮಹಾತ್ಮನ ಮುಂದೆ ಸರ್ವರೂ ನಿಶ್ಶಬ್ದ. ಶ್ರೀ ಹನುಮಂತಪ್ಪನವರು ತಮ್ಮ ಬೆರಳುಗಳಿಂದ ಗಂಧದ ಮರವನ್ನು ಕಡೆದ ಮೂರ್ತಿಯಲ್ಲ! ಅದು! ಅವರ ತಪಸ್ಸೇ ಗಂಧದ ಮೂರ್ತಿಯಾಗಿ ಮಾರ್ಪಾಡಾಗಿದ್ದುದು—ನೋಡಿದವರು ಕಾಯಾ ವಾಚಾ ಮನಸಾ ಅಹಿಂಸರಾದುದು ಆ ತಪಸ್ಸಿನ ಪ್ರಭಾವ.

ಇಂತಹ ಗುಡಿಗಾರ ಋಷಿಗಳಿರುವ ತನಕ ನಮ್ಮ ಕಲೆಯು ಅವನತಿ ಹೊಂದಿದೆ ಎಂದು ಯಾರೂ ಹೇಳುವಂತಿಲ್ಲ!

* * *

ಚಿಕ್ಕಪೇಟೆ, ನೋಡಿದಿಯಾ ತಮ್ಮಾ—ದೊಡ್ಡಪೇಟೆ
ಬಳೆಗಳು ಬೇಕೆ, ತಂಗಿ—ರಿಬ್ಬನ್ ಬಳೆಗಳು—
ಹುರಿಗಾಳು ಬೇಕೆ? ಕರಿಮಣಿ ಬೇಕೆ?
ಸರಿಯಾಳು ಬೇಕೆ? ಮಲ್ಲಯುದ್ಧಕ್ಕೆ?
ಕಿಂದರಿ ಜೋಗಿ ಹಾಡನು ಕೇಳಿ!
ಬೆಂದ ಮನೆಯನು ಆರಿಸಲಿಹೆವು!

ಇತ್ಯಾದಿಯೆಲ್ಲವೂ ಯಥಾ ಪ್ರಕಾರ.

* * *

ದೇಶದ ಬೆನ್ನು ಮೂಳೆ ರೈತ. ಇದನ್ನು ಕೇಳಿ ಕೇಳಿ ಬೇಜಾರಲ್ಲವೇ? ಆದರೆ ಈ ಬೆನ್ನು ಮೂಳೆ ಬಿಗಿಯಾಗಲು, ರೇಷ್ಮೆ ಕೈಗಾರಿಕೆ—ಒಂದು ತೆನೆ ಬರುವೆಡೆ ಎರಡು ತೆನೆ ಬರುವಂತೆ ಮಾಡುವುದು—ಒಂದು ರೂಪಾಯಿ ಪೋಲು ಮಾಡುವುದನ್ನು ನಿಲ್ಲಿಸುವ ವಿಧಾನ—ಇತ್ಯಾಗಿ ಇತ್ಯಾದಿಗಳೆಲ್ಲವೂ ಯಥಾ ಪ್ರಕಾರ!

* * *

ಬೇರೆ ಮಾರ್ಗವೇ ಇಲ್ಲ

ಲಗ್ನದಲ್ಲಿ ಬುಧ. ಸ್ವಕ್ಷೇತ್ರ ಅವನಿಗೆ. ಅಂದ ಮೇಲೆ ವಾಚಾಳಿ ಆಗೋದು ಖಂಡಿತ. ಅಂತ ವರಾಹ ಮಿಹಿರ ಎಲ್ಲೋ ಹೇಳಿದ್ದನಂತೆ.

ಆದನ್ನ ಶಾಸ್ತ್ರಿಗಳು ನನ್ನ ಜಾತಕ ನೋಡಿ ಹೇಳಿದರು. ನೀನು ಏನು ಮಾತನಾಡಿದರೂ ಸರಸವಾಗಿರುತ್ತೆ. ಏನು ಭಾಷಣ ಮಾಡಿದರೂ ಕಿವಿಗೊಟ್ಟು ಕೇಳುತ್ತಾರೆ. ಏನಂದರೂ ನಡೆಯುತ್ತೆ ಎಂದು ಭವಿಷ್ಯ ನುಡಿದರು.

ನಾನಿರುವುದು ಮಲೆನಾಡ ಹಳ್ಳಿಯಲ್ಲಿ. ಅಲ್ಲಿನ ಹಳ್ಳಿಗಳು ಗೊತ್ತಲ್ಲಾ. ಹಳ್ಳಿಗೊಂದು ಮನೆ. ಗುಡ್ಡಕ್ಕೊಂದು ಹಳ್ಳಿ ಹಾಗೆ. ಯಾಚನೆಗೆ ಬಂದ ಶಾಸ್ತ್ರೀಗೆ ಅನ್ನ ಹಾಕಿದ್ದಕ್ಕೆ ಈ ಭವಿಷ್ಯ ಹೇಳಿ ಹೋದ.

ನಮ್ಮನೆಯಲ್ಲಿ ನಮ್ಮಪ್ಪ—ಹುಟ್ಟು ಕಿವುಡು ಆತನಿಗೆ. ನಮ್ಮಮ್ಮ ಅವಳಿಗೆ ವಿರಾಮವೇ ಇಲ್ಲ. ನನ್ನ ಹೆಂಡತಿ ಅತ್ತೆ ಎದುರಿಗೆ ಆಕೆ ನನ್ನ ಮುಖಾನೂ ನೋಡೋಲ್ಲ. ನಾಲ್ಕು ಜನ ಮಕ್ಕಳು. ಯಾವಾಗಲೂ ತಾತನ ಜತೆಯಲ್ಲೇ ಇರೋವು. ಯಾರ ಹತ್ತಿರ ನನ್ನ ವಾಚಾಳಿತನ ತೋರಿಸಲಿ? ಇವನ ಭವಿಷ್ಯ ಹೇಗೆ ಸತ್ಯವಾಗುತ್ತೆ ಎಂದುಕೊಂಡಿದ್ದೆ.

* * *

ಶಿವರಾತ್ರಿ ಇನ್ನೂ ಮೂರು ದಿನ ಇದೆ ಅನ್ನೋವಾಗ. ನಾನು ಮನೆ ಹೊರಗೆ ಮರದ ಕೆಳಗೆ ಕರುಗಳಿಗೆ ಜೋಳ ತಿನ್ನಿಸುತ್ತಿದ್ದೆ. ಲಿಂಗಯ್ಯ ಬಂದ. "ಅಯ್ಯಾವರೇ? ಈ ಸಾರ್ತಿ ಹಬ್ಬದ ಹೊತ್ತಿಗೆ ಧೂಮಕೇತು ಕಾಣಿಸುತ್ತೆ. ದೇಶಕ್ಕೆ ಅಪಾಯ ಅಂತ ಹಟ್ಟೀಲಿಂದರು. ನೀವು ಪತ್ರಿಕೆ ಪುಸ್ತಕ ಓದೋವರು, ಕೇಳಿಕೊಂಡು ಹೋಗೋಣಾ ಅಂತ ಬಂದೆ" ಎಂದು ಹೇಳಿದ.

"ಹೌದು! ಲಿಂಗಯ್ಯ! ಈ ಸಾರಿ ಧೂಮಕೇತು ಪಶ್ಚಿಮದಲ್ಲಿ ಕಾಣಿಸಿಕೊಳ್ಳುತ್ತೆ. ತಲೆ ಪಶ್ಚಿಮಕ್ಕಿದ್ದರೂ, ಬಾಲ ಪೂರ್ವಕ್ಕೆ ರಬ್ಬಿರುತ್ತೆ. ಕೆಲವು ದಿನ ಆಕಾಶಾನೆಲ್ಲಾ ಗುಡಿಸುತ್ತೆ. ಹೀಗೆ ಗುಡಿಸಿ ಬಿದ್ದಿ ಮಾರೋ ಹೊತ್ತಿಗೆ ಪೂರ್ವ ಎಲ್ಲಾ ಶುಭ್ರವಾಗಿ ಸ್ಮಶಾನ ಆಗುತ್ತೆ. ಪಶ್ಚಿಮದಲ್ಲಿ ಒಂದು ದೊಡ್ಡ ತಲೆ ಬಿದ್ದೋಗುತ್ತೆ" ಎಂದು ನುಡಿದೆ.

ನ್ಯಾಯವಾಗಿ ಅಷ್ಟು ಹೊತ್ತಿಗೆ ಆ ಮರದಲ್ಲಿದ್ದ ಹಕ್ಕಿಗಳೆಲ್ಲವೂ ಚಿಲಿಪಿಲಿಗುಟ್ಟುತ್ತಾ ಇರಬೇಕು. ಅದೊಂದು ತರಹ ಹಿನ್ನೆಲೆಯ ಸಂಗೀತ. ಮಲೆನಾಡಿನಲ್ಲಿ. ನಾನು ಇದು ಹೇಳಿದಾಗ ಹಿನ್ನೆಲೆಯ ಸಂಗೀತವೇ ಇರಲಿಲ್ಲ. ಯಾಕೆಪ! ಬಿಕೋ! ಅಂತಿದೆಯಲ್ಲಾ! ಎಂದು ಕತ್ತೆತ್ತಿ ನೋಡಿದೆ, ಎಲ್ಲಾ ಪಕ್ಷಿಗಳೂ ಕಾಗೆ ಕಾಜಾಣ, ಗುಬ್ಬಿ. ಗೂಡ್ಲಕ್ಕಿ—ಗಿಣಿ, ಆರಗಿಣಿ ಎಲ್ಲವೂ ನನ್ನ ಕಡೆಯೇ

ನೋಡುತ್ತಾ, ನಾನು ಹೇಳಿದ್ದನ್ನೇ ಕೇಳುತ್ತಾ ಇದ್ದುವು. ಲಿಂಗಯ್ಯನೂ ನೋಡಿದ. "ಅಯ್ಯಾ! ನಮ್ಮ ತಾತ ಹೇಳ್ತಾ ಇದ್ದರು. ಯಾರು ಮಾತ ನಾಡಿದಾಗ ಪಕ್ಷಿಗಳೆಲ್ಲವೂ ಕಿವಿಗೊಟ್ಟು ಪಿಟಕ್ಕನ್ನದೆ ಕೇಳುತ್ತವೋ ಆಗ ದೇಶ ದಲ್ಲಿ ಅನಾಹುತ, ಅನಾವೃಷ್ಟಿ ಎಂತ. ಯಾಕೋ! ಈಗ ಹೆದರಿಕೆ ಆಗುತ್ತಲ್ಲಾ! ನೀವು ಈ ಊರು ಬಿಟ್ಟು ಬೆಂಗಳೂರಿಗೆ ಹೋಗಿಬಿಡಿ. ನಿಮ್ಮ ಜಮೀನು ಮನೆ ಎಲ್ಲವನ್ನೂ ನಾನು ಕೊಂಡುಕೋತೇನೆ" ಎಂದ.

ಅದರದೆಲ್ಲಾ ಬೆಲೆ ಐದು ಸಾವಿರ ಆಗಬಹುದು. ಇಪ್ಪತ್ತು ಸಾವಿರ ಕೊಟ್ಟರೆ ಹೊರಟುಹೋಗ್ತೇನ ಎಂದೆ.

"ಹ್ಞೂ" ಅಂತ ಒಪ್ಪಿಕೊಂಡ. ಆದರೆ ಮನೆ ನನಗೇ ಬೇಕು ಎಂದೆ. ಆಗಲಿ ನೀವು ಹೊರಟು ಹೋದರೆ ಸಾಕು ಎಂದ.

ಒಪ್ಪಿ, ಮನೆಯವರನ್ನ ಒಪ್ಪಿಸಿ, ಅವರಿಗೆ ಹತ್ತು ಸಾವಿರ ಕೊಟ್ಟು, ಬೆಂಗಳೂರಿನಲ್ಲಿ ವ್ಯಾಪಾರ ಮಾಡ್ತೀನಿ ಇನ್ನು ಹತ್ತು ಸಾವಿರದಲ್ಲಿ, ಸ್ವಲ್ಪ ಕುದುರಿದ ಮೇಲೆ, ಕರೆಸಿಕೊಳ್ಳುತ್ತೀನಿ, ಲಿಂಗಯ್ಯ ನಿಮ್ಮ ಸಹಾಯಕ್ಕೆ ಇರು ತ್ತಾನೆ ಎಂದು ಹೇಳಿ ಬೆಂಗಳೂರಿಗೆ ಬಂದೆ.

ಇಲ್ಲಿ ನಾನು ಎಲ್ಲಿ ಮಾತನಾಡಲೀ, ಎರಡು ಗುಬ್ಬಚ್ಚಿಗಳೋ ಅಥವಾ ಎರಡು ಕಾಗೆಗಳೋ ಅಥವಾ ಎರಡು ಗಿಣಿಗಳೋ ನನ್ನ ಮಾತನ್ನೇ ಕೇಳುತ್ತಾ ಕುಳಿತುಬಿಡುತ್ತವೆ. ಎಲ್ಲಿಗೆ ಹೋದರೂ ಅವೂ ಹಾರಿ ಬಂದು ಕಿಟಕಿ ಮೇಲೆ ಬಾಗಿಲ ತುದೀಲಿ ಕುಳಿತುಬಿಡುತ್ತವೆ. ಹೀಗಾಗಿ ನಾಲ್ಕು ಹೋಟಲುಗಳಿಂದ ನನ್ನನ್ನು ಹೊರದೂಡಿದರು. ಮೂರು ಛತ್ರದಿಂದ ಹೊರಗಟ್ಟಿದರು ನನ್ನನ್ನು ನನ್ನ ವಾಚಾಳತ್ವ ಈ ಪಕ್ಷಿಗಳಿಗೆ ಇಷ್ಟು ರುಚಿಯಾದದ್ದು ನನ್ನ ಪ್ರಾಣಕ್ಕೇ ಬಂತು.

ಕೋಟೆ ಬಾಗಿಲ ಹನುಮಂತರಾಯನ ಗುಡಿಬಾಗಿಲ ಸ್ವಾಮಿಾನ ಕೇಳಿದೆ. ನನ್ನ ಹಣೇಬರಹ ಹೀಗಾಯ್ತು. ಇದಕ್ಕೆ ಮುಕ್ತಿ ಇಲ್ಲವೇ? ಎಂದು ಅತ್ತ ಎಂಟಾಣೆ ಇಸುಕೊಂಡು ಅಭಯ ಕೊಟ್ಟ. ಇನ್ನು ಮೇಲೆ ಹೇಳಿದ್ದೇ ಹೇಳುಕ್ಕೆ ಶುರುಮಾಡಿ. ಕೈಲಾಗದ್ದನ್ನೇ ಮಾಡುತ್ತೀನಿ ಎಂದು ಭಾರೀ ಸುಳ್ಳು ಹೇಳಿ, ಲೋಕದಲ್ಲೆಲ್ಲಾ ಸುಭಿಕ್ಷ ಅಂತ ಸಾರಿ. ಮೋಸ ಲಂಚ, ಅನ್ಯಾಯ ಎಲ್ಲವೂ ಸ್ವರ್ಗದಲ್ಲೇ ಇರೋದು, ನಮ್ಮ ದೇಶದಲ್ಲಿ ಇಲ್ಲವೇ ಇಲ್ಲ ಅನ್ನಿ. ಹೀಗೆಲ್ಲಾ ಮಾತನಾಡಿದರೆ ಪಕ್ಷಿಗಳಿಗೂ ಬೇಜಾರಾಗಿ ಹಾರಿಹೋಗುತ್ತವೆ. ಅಂದ ಮೇಲೆ ನೀವು ಸುಖವಾಗಿ ವ್ಯಾಪಾರ ಏನಾದರೂ ಮಾಡಬಹುದು—ಇದು ಫಲಿಸಲು ಸಹಾಯವಾಗುವಂತೆ ಒಂದು ಯಂತ್ರ ಕಟ್ಟಿಕೊಡ್ತೀನಿ. ಅಮವಾಸ್ಯೆ ನಡು ರಾತ್ರಿ ಹೊತ್ತಿಗೆ ಬನ್ನಿ. ದೇವಿಪೂಜೆ ಮಾಡಿ ಕಟ್ಟುತ್ತೀನಿ ಎಂದ.

ಅಮಾವಾಸ್ಯೆ ದಿವಸ ತಾಯಿತ ಕಟ್ಟಿದ. ಮಾರನೇ ದಿನದಿಂದ ಹೊಸ ವಾಚಾಳತ್ವ ಶುರು ಮಾಡಿದೆ. ಅವನು ಹೇಳಿಕೊಟ್ಟ ಹಾಗೆ. ಮೊದಲು ಮೊದಲು ಗಿಳಿಗಳು ಬೇಜಾರು ಪಟ್ಟುಕೊಂಡು ಹೊರಟುಹೋದುವು. ಆಮೇಲೆ ಕಾಗೆ ಕಾಜಾಣ ಹಾರಿಹೋದುವು. ಕಡೆಗೆ ಗೂಬೆಗಳು ಕೂಡ ತಡೆಯಲಾರದೆ ಹೋಗಿಬಿಟ್ಟುವು.


ಸುಖವಾಗಿರಬಹುದು ಎಂದಿದ್ದೆ. ಆದರೆ ಈ ಹೊಸ ವಾಚಾಳತ್ವ ಬೆನ್ನು ಹತ್ತಿದೆ. ನಾನೇನೆ ಅನ್ನಲಿ ಅಪದ್ಧದ ಧಾಟಿಯಲ್ಲೇ ನಾಲಿಗೆ ಹೊರಳುತ್ತೆ. ಬಾಯಿ ಬಿಟ್ಟರೆ ಬರೀ ಸುಳ್ಳೇ! ನನ್ನ ಮಾತು ನಾನು ಕೇಳಿದರೆ ನನಗೆ ನಾನೇ ಒದ್ದುಬಿಡಲೇ ಎನ್ನಿಸುತ್ತದೆ.

ಇನ್ನು ಈಗ ನಾನೇನು ವ್ಯಾಪಾರ ಮಾಡಲಿ? ನಾನು ಹೇಗೆ ಜೀವನ ಸಾಗಿಸಲಿ ಎಂದೇ ಯೋಚನೆಯಾಗಿದೆ.

ರಾಜಕೀಯಕ್ಕೆ ಇಳಿದು ಪ್ರತಿಪಕ್ಷ ಒಂದು ಹೊಸದಾಗಿ ಶುರು ಮಾಡಲೇ ಎನ್ನಿಸುತ್ತದೆ. ಅದು ಬಿಟ್ಟರೆ,

"ಬೇರೆ ಮಾರ್ಗವೇ ಇಲ್ಲ" ಎನ್ನಿಸುತ್ತಲೂ ಇದೆ.

—ಪಕ್ಷಿರಾಜ.



ಟ್ರಾಫಿಕ್ ಸೈನ್ಸ್‌ಗಳಿಗೆ ಚಿತ್ರ ಬರೆಸಿದರೆ?

★ ನಯಗಾರಿಕೆ ! ಪ್ರೂಫ್ ★

---o---

"ಇವತ್ತು ಈ ಮನಿ ಆರ್ಡರ್ ಕಳಿಸಬೇಕು ಅಂದ್ರೆ! ನಾನು ಫಾರಂ ಎಲ್ಲಾ ಭರ್ತಿಮಾಡಿದ್ದೀನಿ, ನೀವು ಹೋಗಿ ಕಳಿಸಿಬಿಟ್ಟು ಬನ್ನಿ" ಎಂದಳು ನನ್ನ ಅರ್ಧಾಂಗಿ. ಬೆಳಗ್ಗೆ ಎಂಟು ಗಂಟೆ ಹೊತ್ತಿನಲ್ಲಿ.

"ನಿನ್ನ ತಮ್ಮನಿಗೆ ನಿನ್ನ ಗೌರೀಹಬ್ಬದ ಹಣ ಕಳಿಸುಕ್ಕೆ ನಾನೇಕೆ ಹೋಗಲಿ, ಬೇಕಾದರೆ ನೀನೆ ಹೋಗು. ಅಂಚೇ ಕಛೇರಿ ಕೂಡ ಹತ್ತಿರವೇ ಇದೆಯಲ್ಲಾ!" ಎಂದೆ.

ಗಂಡಸಿಗೆ, ಮೀಸೆಹೊತ್ತ ಗಂಡಸಿಗೆ ಅಷ್ಟೂ ಜಬರ್ದಸ್ತಿ ಬೇಡವೇ? "ಹಾಗೇ ಆಗಲಿ ಅಂದ್ರೆ. ಆದರೆ ಅಂಚೆ ಕಛೇರೀಲಿ ಹೊತ್ತಾದರೆ ನಿಮಗೆ ಕಛೇರಿ ಹೊತ್ತಿಗೆ ಅಡಿಗೆ ಹೇಗೋ ಏನೋ ಅದಕ್ಕೋಸ್ಕರ ಇನ್ನೊಂದು ಗಂಟೇಲಿ ಹಿಂತಿರುಗಿ ಬರದೇ ಇದ್ದರೇ ಅಡಿಗೇ ಮನೆ ಕಡೆ ನೋಡಿಕೊಳ್ಳಿ. ಅಕ್ಕಿ ಕುಕ್ಕರ್‌ನಲ್ಲಿದೆ. ಇನ್ನೊಂದೂವರೆಗಂಟೆಗೆ ಬೇಯುತ್ತೆ. ಬೇಳೆ ಬೇಯುಕ್ಕೆ ಹಾಕಿದ್ದೇನೆ" ಅಂತ ಸ್ವಯಂ ಮುಂಜಾಗ್ರತ ಕ್ರಮ ಸೂಚಿಸಿ, ಹೊರಗೆ ಕಾಲಿಟ್ಟಳು ನನ್ನ ಅರ್ಧಾಂಗಿ.

ಒಂಭತ್ತಾಯಿತು, ಕಾಲುಂಗರದ ರವಕ್ಕೆ ಕಾದೂ ಕಾದೂ ಸುಸ್ತಾಗಿ, ಮಿಕ್ಕ ಅರ್ಧ ಅಂಗಿಯನ್ನು ಬಿಚ್ಚಿಟ್ಟು ನಾನು ನಳಮಹಾರಾಜನ ಪಾರ್ಟು ವಹಿಸಿದೆ.

ಹತ್ತೂಮುಕ್ಕಾಲು. ಅಡಿಗೆಯೆಲ್ಲಾ ಮುಗಿಯಿತು. ಅಡಿಗೆ ನಾನೇ ಮಾಡಿದ್ದರೂ ಕೂಡ. ಆ ಒಗ್ಗರಣೆ ವಾಸನೆ ಹಿಡಿದು. ಬಾಯಿ ನೀರಾಡುತ್ತಿತ್ತು. ಆ ಮಹಾ ನಳ ತನ್ನ ಪಾಕವನ್ನು ತಾನೇ ಮೆಚ್ಚಿನ್ನಂತೆ, ಅವನ ಜಾತಕದಲ್ಲಿ ಕಾರ್ಕೋಟ ವಿಷವೇ ಬರೆದಿತ್ತಲ್ಲಾ! ಆ ನಳಮಹಾರಾಜನಿಗಿಂತ ಈ ಖಳ ನನಗೇ ಜಾತಕ ಚೆನ್ನಲ್ಲವೇ ಎಂಬೀ ಆಲೋಚನೆಗಳು ಹೊಳೆಯದೇ ಇರಲಿಲ್ಲ

ನನ್ನ ತಪ್ಪಿಗೆ ನಾನೇ ಬಡಿಸಿಕೊಂಡೆ. ಹನ್ನೊಂದು ಗಂಟೆ ಕಛೇರಿಗೆ, ನಮಗೆ ಸ್ವಾತಂತ್ರ್ಯ ಬಂದ ಮೇಲೆ. ಹನ್ನೆರಡಕ್ಕೆ ಹೋದರೆ ಪರವಾಗಿಲ್ಲ. ಅಷ್ಟು ಹೊತ್ತಿಗೆ ಜವಾನ ಬಂದಿರ್ತಾನೆ. ಕಾಫಿ ತಾ! ಎಂದು ಅವನನ್ನು ಕಳಿಸಬಹುದು. ಅದು ಬಿಟ್ಟು ಒಂದು ಗಂಟೆಗೆ ನಾನು ಹೋದರೆ, ಆಕಸ್ಮಾತ್ ಆಫೀಸರು "ಎಲ್ಲಯ್ಯಾ! ಶಿವಣ್ಣಾ ಒಂದು ಚಿಟಿಕೆ ನಶ್ಯ ಕೊಡು ಎಂದು ಹೇಳುವ

ದಕ್ಕೆ ಹೇಳಿ ಕಳಿಸಿದರೆ, ನಾನಿಲ್ಲದೇ ಇದ್ದರೆ ಗತಿ ಏನು ನನ್ನ ಹೆಂಡತಿ ಮಕ್ಕಳಿಗೆ? ಆದಕ್ಕೇ ಹನ್ನೆರಡೂವರೆಗಾದರೂ ಆಫೀಸಿಗೆ ಹೋಗಲೇಬೇಕು. ಹನ್ನೊಂದೂವರೆಗೆ ಊಟ ಎಲಡಿಕೆ ಮುಗಿಸಿ. ಅರ್ಧ ಗಂಟೆ ನಿದ್ರೆಮಾಡಿ, ಇನ್ನರ್ಧ ಗಂಟೇಲಿ ಕಛೇರಿ ಸೇರಿದರೆ ಬದುಕಿದೆ, ಎಂದುಕೊಂಡು ತಟ್ಟೆಗೆ ಬಡಿಸಿದ್ದನ್ನ ಉಂಡು, ನಾನೇ ಎಲೆಗೆ ಸುಣ್ಣಹಚ್ಚಿ, ತಾಂಬೂಲ ಚರ್ವಣಂ ಆರಾಧಯಾಮಿ ಮಾಡಿ ಮಲಗಿ ಏಳೋ ಹೊತ್ತಿಗೆ ನನ್ನ ಕಾಮಾಂಗಿ ಹಾಜರು.

"ಯಾಕೇ? ಇಷ್ಟು ಹೊತ್ತು?" ಜಬರದಸ್ತಿನಿಂದ ಕೇಳೋದೇನೋ ಕೇಳಿದೆ. ಓದಿದ ಹುಡುಗಿ! ಪದವೀಧರೆ! ಎರಡು ಮೆಡಲು, ಸ್ವ ಅಮೃತ ಹಸ್ತದಿಂದ ದಯಪಾಲಿಸಿದ್ದನ್ನ ತೆಗೆದುಕೊಂಡವಳು— ಜರೂರಿನಿಂದ ಕೇಳಿ ಸಾವಧಾನವಾಗಿ ನೋಡಿದೆ. ಮುಖವೆಲ್ಲಾ ಎಣ್ಣೆಗೆಂಪು ಗುಂಗುರು ಕುರುಳೆಲ್ಲಾ ಗಾಳಿಗೆ ಹಾರಾಡುತ್ತಿದೆ. ಅಲ್ಲಲ್ಲೇ ಬೆವರ ಹನಿ. ಮುಖ್ಯ ಅರ್ಧಾಂಗಿ ಸುಸ್ತಾದಂತಿತ್ತು. ಅಯ್ಯೋ! ಬಾಯಿ ಬೇಗ ಹಾಕಿಕೊಳ್ಳಬಾರದಾಗಿತ್ತೆ ಎನ್ನಿಸಿತು. ಇನ್ನು ಗುಡುಗು ಮಿಂಚು, ಮಳೆ ಪ್ರಳಯ ಪ್ರಾಣನಷ್ಟ, ಎಲ್ಲವೂ ಹಿಂದೆಯೇ ಬರುತ್ತಲ್ಲಾ ಎನ್ನಿಸಿತು.

ಒಂದೂ ಆಗಲಿಲ್ಲ.

ಉಶ್ಶಪ್ಪಾ! ಎಂದಳು. ಕುರ್ಚಿ ಮೇಲೆ ಬಿದ್ದಳು. ಈ ಅಂಚೇ ಕಛೇರೀಲಿ ಈ ನಯಗಾರಿಕೆ, ಈ ವಿನಯವಾರ ಏಕೆ ಸುರುವಾಯಿತೋ ಕಾಣೆ! ನಮ್ಮನ್ನ ಕೊಲ್ಲುಕ್ಕೆ—ಮೊದಲು ರೇಗಿ ಬೀಳ್ತಿದ್ದ ಅಂಚೆ ಕಛೇರಿಯೇ ಚೆನ್ನ" ಎಂದು ಪಲುಕಿದಳು ನನ್ನ ಅರ್ಧಾಂಗಿ.

"ಯಾಕೆ!" ಎಂದೆ ಹುಷಾರಾಗಿ, ವಿನಯವಾಗಿ.

"ನೋಡಿ ಅಂದ್ರೆ. ವಿನಯವಾರಕ್ಕೆ ಮುಂಚೆ, ಒಂದು ಮನಿಯಾರ್ಡರ್ ಫಾರಂ ತೆಗೆದುಕೊಂಡು ಹೋದರೆ, ಅಂಚೆ ಮಾಸ್ತರು ಮೇಲೆ ಬೀಳುವಂತೆ, ರೇಗುತ್ತಿದ್ದ. ಮೂರೇ ನಿಮಿಷದಲ್ಲಿ ಮನಿ ಆರ್ಡರ್ ರಸೀದಿ ಕೊಡುತ್ತಿದ್ದ. ಹಾಳಾಗಿ ಹೋಗಿ ಎನ್ನುವಂತೆ ದುರುಗುಟ್ಟಿಕೊಂಡು ನೋಡಿ ಬೇಗ ನಮ್ಮನ್ನು ಕಳಿಸುತ್ತಿದ್ದ. ಇವತ್ತು ನೋಡಿ! ಹುಷ್! ಎಂದಳು. ವನಿತೆ ಬಿಸಿಯುಸಿರ್ ಬಿಟ್ಟು ಸುಸ್ತಾದಳು.

"ಯಾಕೆ! ಮನಿ ಆರ್ಡರ್ ಕಳಿಸಲಿಲ್ಲವೇ? ಎಂದೆ.

"ಇಲ್ಲ. ನಿಮಗೆ ಊಟಕ್ಕೆ ಹೊತ್ತಾಗುತ್ತೇನೋ ಎಂದು ನನ್ನ ಸರದೀಗೆ ಮುಂಚೆಯೇ ಬಂದುಬಿಟ್ಟೆ" ಎಂದಳು.

ನಿಷನಿಮಿಷ! ಅಬಲೆಯರಿಗೆ ನಾವು ಬೆಂಬಲ ಇಂತಹ ಹೊತ್ತಿನಲ್ಲೇ ಕೊಡಬೇಕು! ಅದೇ ಸುಗಮ ಮಾರ್ಗ ಜೀವನದ ಕಂಟಕ ಹಾದಿಯಲ್ಲಿ! ಎಂದಂದುಕೊಂಡೆ.

"ಹೋಗಲೀ ಬಿಡೆ! ನಾನು ನಾಳೇ ಬೇಗ ಹೋಗಿ ಕಳಿಸುತ್ತೇನೆ" ಎಂದು ಅಭಯವಚನ ಕೊಟ್ಟೆ.

ಅವಳು ಊಟಮಾಡಿದ ಮೇಲೆ ನಾನು ಕಛೇರಿಗೆ ಹೋದೆ.

* * *

ಮರುದಿನ. ಎಂಟೂವರೆ ಗಂಟೆಗೆ ಅಂಚೆ ಕಛೇರಿಯಲ್ಲಿ ನಾನು ಹಾಜರು. ಅಂಚೆಮಾಸ್ತರ ಬಾಯಿ ಕಿವಿಯಿಂದ ಕಿವಿತನಕ ಹರಡಿತ್ತು. ಅಂತಹ ದೇಶಾವರದ ನಗೆಮೊಗ. ಅಂತಹ ವಿನಯ. ನನ್ನದು ಮೂರನೆಯ ಸರ್ದಿ. ಬೇಗ ಆಗುತ್ತೆ ಅಂತ ಕಾದು ನೋಡುತ್ತಿದ್ದೆ.

ಮೊದಲನೆಯವ ಮಾಸ್ತರನ್ನು ನೋಡಿ ನಕ್ಕು ಒಂದು ಮನಿ ಆರ್ಡರ್ ಫಾರಂ, ಹಣ ಎರಡನ್ನೂ ಆ ಕಿಟಕಿ ಕಂಡಿಯಿಂದ ಒಳಕ್ಕೆ ಸೂಕಿದ.

"ಚೆನ್ನಾಗಿದ್ದೀರಾ, ಭೀಮರಾಯರೇ" ಎಂದರು ಅಂಚಾ ಮಾಸ್ತರು ಮನಿ ಆರ್ಡರ್ ಫಾರಂನಲ್ಲಿ ಅವರ ಹೆಸರು ಓದಿಕೊಂಡು.

"ನಮ್ಮಪ್ಪ ಭೀಮರಾಯರು, ನನ್ನ ಕಳಿಸಿದ್ದಾರೆ" ಅಂದ ಈ ಘಟೋತ್ಕಜ.

"ಅಯ್ಯೋ! ನನಗೆ ಇಷ್ಟು ತಿಳಿಯಲಿಲ್ಲವಲ್ಲ! ಭೀಮರಾಯರು ಚೆನ್ನಾಗಿದ್ದಾರೆಯೋ! ನಾನು ಕೇಳಿದೆ ಅಂತ ಹೇಳಿ" ಅಂದರು ಮಾಸ್ತರು ನಗುನಗುತಾ.

"ಹ್ಞೂ" ಎಂದು ಘಟೋತ್ಕಜ. ಮಾತು ಮುಗಿಸಿದ.

ಮಾಸ್ತರು ಬಿಡಲಿಲ್ಲ. ವಿನಯವಾರ.

"ತಾವು ಯಾವ ಕೆಲಸದಲ್ಲಿದ್ದೀರೋ" ಎಂದರು.

"ನಾನು ಲೋಯರ್ ಸೆಕೆಂಡರೀಗೆ ಕಟ್ಟುತ್ತೇನೆ" ಎಂದ ಘಟು. ಮೀಶೆ ತುದಿ ಕಚ್ಚಿಕೊಂಡರು ಮಾಸ್ತರು.

"ನಿನಗೆ ಫಸ್ಟ್‌ಕ್ಲಾಸ್ ಬರಲಯ್ಯಾ!" ಎಂದು ಆಶೀರ್ವದಿಸಿದರು.

"ಹೀಗೆ ನಾಲ್ಕು ವರ್ಷದಿಂದ ಕಂಡವರೆಲ್ಲಾ ಹರಿಸಿದ್ದಾರೆ" ಎಂದ ಮೀಶೆ ಹೊಮ್ಮಿದ ಘಟು.

ಆಗ ಮಾಸ್ತರು ತಮ್ಮ ಕೆಲಸ ಮುಗಿಸಿ ಘಟುವನ್ನು ಕಳಿಸಿದರು.

ಎರಡನೆಯವ ಒಂದು ರೆಜಿಸ್ಟರ್ಡ್ ಲಕ್ಕೋಟೆ ಕಂಡಿಯಲ್ಲಿ ತೂರಿದ. ಅದನ್ನು ಅಂಗೈಲೇ ತೂಕಮಾಡುತ್ತಾ ಮಾಸ್ತರು ಕಿಟಕಿಯಿಂದೀಚೆಗೆ ನೋಡಿದರು.

"ಯಾಕೆ ಹಲ್ಲು ನೋವೇ? ಎಂದರು.

ವಿನಯವಾರ!

"ನೋವಾಗುತ್ತಿತ್ತು. ಹಲ್ಲುವೈದ್ಯರ ಹತ್ತಿರ ಹೋದೆ. ನಾಲ್ಕು ಹಲ್ಲು ವಿಷಪೂರಿತ. ನಾಗರಹಾವಿಗೆ ಎರಡೇ ಹಲ್ಲು ವಿಷಪೂರಿತ ಎಂದು ಇಕ್ಕಳ ಹಿಡಿದು ಬುಸುಗುಟ್ಟಿ ನಾಲ್ಕನ್ನೂ ನಿನ್ನೆ ಸಾಯಂಕಾಲ ರಾಹುಕಾಲದಲ್ಲಿ ಕಿತ್ತು ಹಾಕಿದರು. ಈಗ ನೋವು ಮೊದಲಹಾಗೇ ಇದ್ದೇ ಇದೆ. ಜತೆಗೆ ದವಡೆ ಬಾತುಕೊಂಡಿದೆ. ಹೇಗಿದೀರ್ರೀ? ಹನುಮಂತರಾಯ್ರೇ! ಎಂತ ಜನ ಮಾತಾಡುಸುತ್ತಾರೆ. ದಿಟವಾಗಲೂ ನನ್ನ ಹೆಸರು ಹನುಮಂತರಾಯ ಅಂತ, ಅಪ್ಪ ಅಮ್ಮ ಇಟ್ಟ ಹೆಸರೇ ಅದು!" ಎಂದು ಅಳುಮೊಗನಾದ ಹನುಮಂತರಾಯ.

"ಅಯ್ಯೋ! ಇಷ್ಟಕ್ಕೇ ಮುಖ ಜೋಲು ಹಾಕಿಕೊಳ್ಳಬಾರದು! ಹನುಮಂತರಾಯರೇ! ಎಂದು ಶುರು ಮಾಡಿದರು ಮಾಸ್ತರು.

ವಿನಯವಾರ! ಬಂದವರು ಅತಿಥಿಗಳು ಅವರ ಮನಸ್ಸು ಪ್ರಫುಲ್ಲವಾಗಬೇಕು! ಅದೇ ಕೇಂದ್ರದ ಹುಕುಂ.

ಅಲ್ಲಾ! ಹನುಮಂತರಾಯರೇ. ಎಂಟು ವರ್ಷದ ಹಿಂದಿನ ಮಾತು. ಆಗ ನನಗೆ ನೆಲ್ಲಿಕಾಯಿ, ಹಸಿರು ಮಾವಿನಕಾಯಿ ಅಂದರೆ ಪ್ರಾಣ. ಒಂದು ದಿವಸ ಚೆನ್ನಾಗಿ ತಿಂದೆ. ಮಧ್ಯಾಹ್ನದ ಹೊತ್ತಿಗೆ ಹಲ್ಲೆಲ್ಲಾ ನವೆಯಲಾರಂಭಿಸಿತು. ದಂತ ವೈದ್ಯರ ಹತ್ತಿರ ಹೋದೆ. ಆತ ನಡುಬೆಳಕಲ್ಲಿ ಲಾಂದ್ರ ಹಚ್ಚಿ, ಬಾಯೊಳಕ್ಕೆ ಬೆಳಕುಬಿಟ್ಟು ನೋಡಿ. ಆರು ಹಲ್ಲು ಹಾಳಾಗಿದೆ. ತೆಗೀತೀನಿ ಎಂದ. ನನ್ನ ಛಾದೇಲಿ ಯಾವುದಕ್ಕೂ ಸಿದ್ಧವಿತ್ತೆ. ಹ್ಞೂ ಎಂದೆ. ಆರನ್ನೂ ಒಟ್ಟಿಗೇ ದೊಡ್ಡ ಇಕ್ಕಳ ಹಾಕಿ ಕಿತ್ತ ಎಂದು ನನಗೆ ಜ್ಞಾಪಕ. ಆದರೂ ನೋಡಿ ಆ ಸಾಯಂಕಾಲ ಟೆಲಿಗ್ರಾಫ್ ಚಾಕರಿಯಲ್ಲಿದ್ದೆ. ಆಫೀಸಿಗೆ ಹೋಗಿ ದಿನದಂತೆ ಕೆಲಸ ಮುಗಿಸಿದೆ. ಅಂತಹದರಲ್ಲಿ ನಾಲ್ಕೇ ತೆಗಿಸಿಕೊಂಡು ನೀವು ಏಕೆ ಈ ಜೋಲುಮುಖ ಹಾಕುತ್ತೀರಿ" ಎಂದರು ಮಾಸ್ತರು.

ಹನ್ನೊಂದು ಗಂಟೆ ಹೊಡೆಯಿತು ಗಡಿಯಾರದಲ್ಲಿ ಆಗ. ಆಗ ಪಕ್ಷ ಸರ್ದಿ ನಗುತ ಅಂದರು ಮಾಸ್ತರು.

"ರಾಯರೇ ಮನಿ ಆರ್ಡರ್ ತೆಗೆದುಕೊಳ್ಳುವ ವೇಳೆ ಆಗಿಹೋಯಿತ್ತು. ಜರೂರ್ ಮನಿ ಆರ್ಡರ್ ಬೇಕಾದರೆ ತೆಗೆದುಕೊಳ್ಳಬಹುದು ಅಷ್ಟೆ. ಹತ್ತು

ರೂಪಾಯಿ ಮನಿ ಆರ್ಡರಿಗೆ ಒಂದೂಕಾಲು ರೂಪಾಯಿ ಕೊಡಬೇಕು. ಅವಸರ ಇಲ್ಲದಿದ್ದರೆ ನಾಳೆ ಕಳಿಸುವಿರಂತೆ."

"ಇಲ್ಲಾ! ಮಾಸ್ತರೇ! ಇದು ಎರಡನೇ ದಿನ ಹೀಗಾಗಿರೋದು. ಒಂದೂಕಾಲು ತೆರ್ತೀನಿ" ಎಂದೆ.

"ಹಾಗಾದರೆ ದಯಮಾಡಿ ಆ ಕಿಟಕಿಗೆ ಬನ್ನಿ ಅಲ್ಲಿ ವಿಳಂಬವಾದ ಮನಿ ಆರ್ಡರ್ ತೆಗೆದುಕೊಳ್ಳೋವಾಡಿಕೆ" ಎಂದರು ಮಾಸ್ತರು.

ಆ ಕಿಟಕೀಗೆ ಹೋದೆ.

"ಮನೆಯಲ್ಲಿ ಎಲ್ಲ ಕ್ಷೇಮವೇ" ಎಂದರು ಮಾಸ್ತರು ಅಲ್ಲಿಗೆ ಬಂದಾಗ.

ಈ ಮಾತು, ವಿನಯದವಾರ, ನನಗೆ ಆಗಲೇ ಅನುಭವಕ್ಕೆ ಬಂದಿತ್ತು ವಿನಯ ಮುಗಿಯೋ ಹೊತ್ತಿಗೆ ಹನ್ನೆರಡು. ಆ ವೇಳೆಗೆ ಈ ಕಿಟಕೀನೂ ಬಂದು.

ನಾನು ವಿನಯ ಕಳಚಿಟ್ಟೆ! ಮನೆಯಲ್ಲಿ ಇಲಿ, ಚಿಕ್ಕ, ಜಿರಳೆ ವಿನಹಾ ಇನ್ನು ಯಾರೂ ನನಗಿಲ್ಲ. ಹಟ್ಟೆವಕ್ಕೆ ಇಸ್ಪತ್ತಕ್ಕೆ ಪೋಲೀಸಿನವನು ಬೀಟ್ ಬರ್ತಾನೆ. ಅವನು ಚೆನ್ನಾಗಿದ್ದಾನೆ. ಮೂರಕ್ಕೆ ನಾಲ್ಕಕ್ಕೆ ಕಳ್ಳ ಬರ್ತಾನೆ. ಅವನೂ ಚೆನ್ನಾಗಿದ್ದಾನೆ ನಾನೂ ಹಾಗೇನೆ ನೀವೂ ಹಾಗೇನೆ ಅಂತ ನಂಬಿದ್ದೇನೆ. 'ಬೇಗ ಈ ಕೆಲಸ ಮುಗಿಸಿ' ಎಂದು ಕರುಣಾರಹಿತವಾಗಿ ಅಂದೇ ಬಿಟ್ಟೆ. ಆತನು ಅಳೋದೊಂದೇ ಬಾಕಿ.

"ರಾಯರೇ! ವಿನಯವಾಗಿರು ಅಂತ ಮೇಲಧಿಕಾರಿಗಳು ಹೇಳ್ತಾರೆ. ನೀವು ಹೀಗೆ ರೇಗಿದ್ದೀರಿ ಅಂತ ಅವರಿಗೆ ಗೊತ್ತಾದರೆ ನನ್ನ ಬರ್ತಫ್ ಮಾಡ್ತಾರೆ. ಈ ಇಲಾಖೆ ಬಿಟ್ಟರೆ ಇನ್ನೆಲ್ಲಿ ನನಗೆ ಜೀವನ ದೊರೆಯುತ್ತೆ ಈ ಕಾಲದಲ್ಲಿ ಏನೋ ಮುದ್ರೆ ಒತ್ತಿಕೊಂಡು ರಾಯರ ಹೆಸರು ಹೇಳಿಕೊಂಡು ಜೀವನ ಮಾಡ್ತಿದೀನಿ! ಅದಕ್ಕೆ ಕಲ್ಲು ಹಾಕ್ಬೇಡಿ. ದಯವಿಡಿ ನನ್ನ ಮೇಲೆ!" ಎಂದು ಗೋಗರೆಯಲು ಆರಂಭಿಸಿದ.

ಮೆಲ್ಲಗೆ ಕಿಟಕಿಯಿಂದಲೇ ಅವನ ಕಣ್ಣೊರಸಿ, ಈಗ ರಸೀದಿ ಕೊಡಿ ಎಂದೆ.

ರಸೀದಿ ಕೊಟ್ಟಾಗ ಅದರ ಮೇಲೆ ಅವನ ಕಣ್ಣೀರ ಹನಿ ಎರಡು ಬಿದ್ದಿತ್ತು. ಆಗ ಹನ್ನೆರಡು ಹೊಡೀತು.

ಗೆದ್ದೆ! ಎಂದು ಮನೆಗೆ ಬಂದು, ಕಾರ್ತವೀರ್ಯಾರ್ಜುನ ಕೈಲಾಸ ಆಡಿಸಿದಾಗ ಹೇಗೆ ವಿಲಾಸ ತಿರುವಿದನೋ ಅದೇ ರೀತಿ ನಾನು ನನ್ನ ಅರ್ಧಾಂಗಿಗೆ ಆ ರಸೀತಿ ಕೊಟ್ಟಾಗ ವಿಲಾಸ ತಿರುವಿದೆ.

*

ಆದರೂ ಮನಸ್ಸು ಅನ್ನುತ್ತೆ. ಈ ಹಾಳು ವಿನಯವಾರ ಹೋಗಿ ಮೊದಲಿನ ಕರ್ಕಶ ದಿವಗಳು ಬಂದರೇ ಚೆನ್ನಲ್ಲವೇ? ಎಂದು.

— ಶಿವಣ್ಣ.

ಕೊರವಾವಲೋಕನ

"ಆಗಬೇಕು ತಿರುಪತಿಯವರಿಗೆ--ಹ್ಞಾಗೇ ಆಗಬೇಕು" ಎಂದ ಕೊರವ, ಓದುತ್ತಿದ್ದ ಪತ್ರಿಕೇನ ಮೇಜಿನ ಮೇಲಕ್ಕೆಸೆಯುತ್ತಾ.

"ಏನಾಯ್ತು" ಎಂದೆ ನಾನು ಕನ್ನಡಕವನ್ನು ಮೂಗಿನ ಮೇಲಿಂದ ತೆಗೆದು.

"ಓದಲಿಲ್ಲವೇ ತಿರುಪತಿಗೆ ರಾಜಾಜಿ ಹೋಗಿದ್ದರಂತೆ. ಯಾರು ತಿರುಪತೀಗೆ ಹೋದರೂ ಅಲ್ಲಿನ ಕ್ಷೌರಕರಿಗೆ ಸುಗ್ಗಿ. ಆದರೆ ರಾಜಾಜಿ ಹೋದಾಗ ಅವರುಗಳು ಕೈ ಕೈ ಹಿಸುಕಿಕೊಂಡಿರಬೇಕು. ಅವರಿಗೆ ಹಾಗೇ ಆಗಬೇಕು" ಎಂದ.

* * *

ನನಗೂ ವಿಷ ಏರಿತ್ತು. ಶ್ರೀ ಮಂಡಲ ಅವರ ಹೇಳಿಕೆ ಓದಿದಾಗ. ಅಷ್ಟು ಹೊತ್ತಿಗೆ ಚಪ್ಪಲಿ ಶಬ್ದ ಆಯಿತು. ತಿರುಗಿ ನೋಡಿದೆ. ಕೊರವ.

"ಈ ಮಂಡಲ ಅವರ ಹೇಳಿಕೆ ನೋಡಿದೆಯಾ" ಎಂದೆ.

"ಯಾವ ಮಂಡಲ, ಉರಿ ಮಂಡಲವೇ, ಕೊಳಕು ಮಂಡಲವೇ" ಎಂದ.

"ಅಲ್ಲಾ ಕಣಯ್ಯಾ! ಜೋಗೇಂದ್ರಮಂಡಲ" ಎಂದೆ.

"ಸರಿ! ಈ ಮಂಡಲಕ್ಕೆ ವಿಷ ಎಲ್ಲಿದೆ" ಎಂದ ಕೊರವ.

* * *

"ಕೃತಕ ಅಕ್ಕಿ ಮಾಡ್ತಾರಂತಲ್ಲಯ್ಯಾ! ಇನ್ನು ಮೇಲೆ. ಅಂದರೆ ನಮ್ಮ ಅಕ್ಕಿ ಅಭಾವ ಕುಲಾಯಿಸಿತು" ಎಂದೆ.

ಆಗತಾನೇ ಸಿಗರೇಟ್ ಹಚ್ಚಿದ್ದ ಕೊರವ--ಎರಡು ಸಾರಿ ತುಟಿ ವರಸಿ ಹೇಳಿದ.

"ಏನಂತೆ ಮಹಾ! ಲಂಟಾನಾ ಸೊಪ್ಪಿನಿಂದ ಈ ಸಿಗರೇಟ್ ಮಾಡಿಲ್ಲವೇ? ಸಕ್ಕರೆ ಇಲ್ಲದೆ ಪೆಪ್ಪರ್‌ಮಿಂಟ್ ಮಾಡುಲ್ಲವೇ? ಅಂದ ಮೇಲೆ ಭತ್ತ ಇಲ್ಲದೆ ಅಕ್ಕಿ ಮಾಡೋದೇನು ಕಷ್ಟಾ" ಎಂದು ಲೀಲಾಜಾಲವಾಗಿ ಹೇಳಿದ.

* * *

ದೂರದಲ್ಲಿ ಭಜನೆಮಾಡಿದ ಶಬ್ದ ಇಂಪಾಗಿ ಕೇಳಿಸುತ್ತಿತ್ತು. "ಸಬಕೋ ಸನ್ಮತಿ ದೇ ಭಗವಾನ್" ಹೃದಯ ಉಲ್ಲಾಸವಾಗಿತ್ತು.

"ಎಂತಹ ಉದಾತ್ತವಾದ ಪ್ರಾರ್ಥನೆ" ಎಂದೆ. ಕೊರವನೂ ಇಷ್ಟು ಹೊತ್ತು ಭಜನೆ ಕೇಳುತ್ತಿದ್ದ. ನಾನು ಹೇಳುತ್ತಲೂ ತಿರುಗಿಬಿದ್ದು, ಸಬಕೋ ಬೇಡ ಕಣಯ್ಯಾ! ಈ ಭಜನೆ ಮಾಡ್ತಾ ಇದಾರಲ್ಲ ಅವರಿಗಾದರೂ ಸನ್ಮತಿ ದೇವರು ಕೊಟ್ಟರೆ ಸಾಕು" ಎಂದ.

ಬಿತ್ತಿದ ಕೊಳೆ—

ಮುಂದೇನು?.......ಎಂಬ ಮಹಾ ಪ್ರಶ್ನೆ ಪ್ರಾಣೇಶನನ್ನು ಕಾಡಿತು. ಹುಡುಗ ಬುದ್ಧಿವಂತ ಬಿ. ಎಸ್ಸಿ. ಬಾಟನಿ ತೊಗೊಂಡು ಪಾಸು ಮಾಡಿದ್ದ. ಯಥಾ ಪ್ರಕಾರ 65+15ರ ಹೈಸ್ಕೂಲು ಹೈದರನ್ನೋದಿಸುವ ಕೆಲಸ ಅವನಿಗೆ ಸೇರದು ಈ ಚಿಕ್ಕ ದಂಧೆ ದಾಂಧಲೆಗಳಲ್ಲಿ ಅವನಿಗೆ ನಂಬಿಕೆಯೇ ಇಲ್ಲ. ಬಡಿದರೆ ಭಂಡಾರ ಕಬಳಿಸಬೇಕು— ಆಕಳಿಸಿದರೆ ಅರಮನೇಲೇ ಕಾಲು ಚಾಚಬೇಕೂ ಅನ್ನೋ ಆದರ್ಶ ಪ್ರಾಣೇಶನದು.

ಹತ್ತು ಹಾದಿ ಬಲ್ಲವ—ಓದುವಾಗಲೇ ಕೋಡುಬಂದವನ ಹಾಗೆ ಓಡಾಡಿದವ. ಫ್ರೀಷಿಪ್ ಕಾಲದಲ್ಲಿ ಹರಕಲ ಕೋಟು—ಎಲೆಕ್ಷನ್ ಕಾಲದಲ್ಲಿ ಡಬಲ್ ಬ್ರೆಸ್ಟ್ ಸೂಟು—ಸೀಟು ಸಿಗೋ ಕಾಲಕ್ಕೆ ಹ್ಯಾಪುವೋರೆ ಹಾಕಿ ಕೈಹಾಕಿದ್ದರಲ್ಲಿ ಜಯ ಸಂಪಾದಿಸಿದ ಖದೀಮ ಪ್ರಾಣೇಶ.

ಚಳುವಳಿ ಕಾಲಕ್ಕೆ ಗಾಂಧಿಟೋಪಿ ಮಾರಿದ. ಸ್ವರಾಜ್ಯ ಬಂದಾಗ ಚಕ್ರಧ್ವಜ ತರಿಸಿದ. ಬ್ರಿಟೀಷ್‌ನೋರ ಕಾಲಕ್ಕೆ ಅವರ ಧ್ವಜಾನೂ ಮಾರಿದ ಧೀರ ಪ್ರಾಣೇಶ.

ಯುದ್ಧಕಾಲದಲ್ಲಿ ಎಂದೂ ಶಸ್ತ್ರಾಭ್ಯಾಸ ಮಾಡಿದವನಲ್ಲ. ಮುಂಬರುವ ಸಮರವನ್ನು ಇಂದೇ ಕಾಣುವ ಚಾಣಾಕ್ಷ. ತುಪ್ಪದ ತಿಪ್ಪಯ್ಯ ಸೆಟ್ಟರಿಗೆ ಮಿಲಿಟರಿ ಕಂಟ್ರಾಕ್ಟಿನ ಸುಳುವು ತಿಳಿಸಿ ಅದರ ಲಾಭದ ವೈಖರಿ ತಿಳಿಸಿದ. ಮೇಲೊಂದು ಕೆಳಗೊಂದು ಮಿಶ್ರಣದ ಬಗೆ ಡಬ್ಬದ ತಳ ಅಲ್ಲದೆ ಮತ್ತೆ ಹತ್ತಾರು ವ್ಯಾಪಾರದ ಸೂಕ್ಷ್ಮ ತಿಳಿಸಿದ ಪ್ರಾಣೇಶ. ಶೆಟ್ಟರು ಸಟ್ಟಾ ವ್ಯಾಪಾರಿಗಳಾದರು ಬಂಗಲೆ ಬಂತು. ಕಾರು ಕಂಡರು- ದೇವರು ಅವರ ಪಾಲಿಗೆ ಕಣ್ಣು ತೆರೆದು ನೋಡಿದ. ಪ್ರಾಣೇಶ ಸಿಕ್ಕಾಗ ದೇಶಾವರಿಯ ದೊಡ್ಡ "ಹ್ಹಿ ಹ್ಹಿ ಹ್ಹಿ ಹ್ಹಿ" ನಗುವಲ್ಲದೆ ಮತ್ತೇನೂ ಅವನಿಗೆ ಸಿಕ್ಕುತ್ತಿರಲಿಲ್ಲ.

ರಾಜಯೋಗ ದರಿದ್ರ ಜಾತಕದ ಸಮಾಚಾರ ಪ್ರಾಣೇಶಂದು. ಇವನ ತಲೆಗೆ ಹೊಕ್ಕ ಯಾವುದೊಂದು ಯೋಜನೆಯೂ ಇನ್ನೊಬ್ಬರ ಕಿಸೆ ತುಂಬವ

ಪ್ರಸಂಗವಾಗುತ್ತಿತ್ತಲ್ಲದೆ ಪ್ರಾಣೇಶನ ಪರಿಸ್ಥಿತಿ ಇದ್ದಲ್ಲೇ ಇರುತ್ತಿತ್ತು. ಬಿಸಿನೆಸ್ಸು ಮಾಡೋಕೆ ಬಂಡವಾಳಬೇಕು. ಬಂಡವಾಳಬೇಕಾದರೆ ಬಿಸಿನೆಸ್ಸು ಮಾಡಬೇಕೂ ಅನ್ನುವ ವಿಷವೃತ್ತದಲ್ಲಿ ಸಿಕ್ಕಿಬಿದ್ದಿದ್ದ.

ಒಬ್ಬಳೇ ಮಗಳಿರುವ ಶ್ರೀಮಂತನ ಅಳಿಯನಾಗಬೇಕು ಅಂದರೆ ಸುಖವಾಗಿರಬಹುದು ಎಂದು ಆಲೋಚಿಸಿದ. ಆದರೆ ಅವನ ಮನಸ್ಸಾಗಲೆ ಮೋಹಂ ಮೀನಾಕ್ಷಮ್ಮನವರ ಕಡೆ ಸಂಪೂರ್ಣ ವಾಲಿತ್ತು. ಆದರಿಂದಾಗಿ ಪ್ರಾಣೇಶ ಸಿರಿಯುಳ್ಳ ಸುಂದರಿಯ ಬೆನ್ನು ಬೀಳುವ ಪ್ರಸಂಗಕ್ಕೆ ಹೋಗಲಿಲ್ಲ. ಹೇಗಾದರೂ ಮಾಡಿ ಹಣ ಸಂಪಾದಿಸಿ ಮೀನಾಕ್ಷಿಯೊಡನೆ ಸುಖವಾಗಿರಬೇಕೆಂಬುದೇ ಪ್ರಾಣೇಶನ ಜೀವನದ ಗುರಿ.

ತೇಜಿಯ ಜೂಜಿನಲ್ಲಿ ಲಕ್ಷಾಂತರ ದುಡಿದ ಆಸಾಮಿಗಳನ್ನು ಬಲ್ಲ. ಮರುಕ್ಷಣವೆ ಮನೆ ಮಠ ಮಾರಿಕೊಂಡ ಮಹಾನುಭಾವರ ನೆನಪು ಬಂದು ಸಾಕಪ್ಪ ಈ ತೇಜಿಯ ಗೋಜೇಬೇಡ ಎಂದೆಂದು ಬಿಡುವ. ಇಸ್ಪೀಟಿನಲ್ಲಿ ಇಡೀ ಜೀವನಾನ ಕಳೆದ ಈರಯ್ಯನ ಹರಕು ಅಂಗಿ ನೋಡಿದರೆ ಆ ಹವ್ಯಾಸ ಮಾಡಲು ಯಾರಿಗೆ ಮನಸ್ಸಾಗುತ್ತೆ? ಮತ್ತೆ ಮತ್ತೆ ಅವನ ನೆತ್ತಿ ಮುಕ್ಕುತ್ತಿದ್ದುದು ಹೇಗೆ ಮೀನಾಕ್ಷಿಯ ಕೈಹಿಡಿಯುವುದು? ಮನೆ ಮಾಡಿ ಮೀನಾಕ್ಷಿ ಕರೆತರಬೇಕು—ಮಾನವಾಗಿ ಬಾಳಬೇಕು—ನಿಜ ಅವರೆ ಮನಸ್ಸಿನ ಮಂಡಿಗೆ ಹೊಟ್ಟೆ ತುಂಬುತ್ತದೆಯೆ? ಮುಂದೇನು— ಮಾರ್ಗದರ್ಶಕನಾರು? ಎಂದು ಪರಿತಪಿಸಿದ ಪ್ರಾಣೇಶ.

ಬೇಡಿಗೂ ಬಿಡಿಕಾಸಿಲ್ಲದೆ ಇದ್ದ. ಎರಡಾಣೆಯಲ್ಲಿ ಕಾಫಿ ಬಸಿದು, ಬೇವರ್ಸಿಯ ಹಾಗೆ ಬಿಡಾರ ಹಾಕಿದ್ದ ವೆಂಕಪ್ಪಯ್ಯನ ಹೋಟಲಲ್ಲಿ. ಎದುರಿಗಿದ್ದ ಪೇಪರಿನಿಂದ ಮುಖಮುಚ್ಚಿಕೊಂಡಿದ್ದರಿಂದ ಪ್ರಾಣೇಶನ ಬೆಳೆದ ಗಡ್ಡ ಕಾಣಿಸುತ್ತಿರಲಿಲ್ಲ. ಒಂದೇ ಯೋಚನೆ. ಬಾಟನಿ ತೊಗೊಂಡು ಬಿ. ಎಸ್ಸಿ. ಮಾಡಿದರೂ ಬೇವರ್ಸಿಯಾಗಿ ಬೀದಿ ಬೀದಿ ಅಲೆಯಬೇಕೆ?—ಬಂಡವಾಳವಿಲ್ಲದ ಬಿಸಿನೆಸ್ಸು ಯಾವುದೂ ಇಲ್ಲವೆ? ಎಂದು ಗಾಢವಾಗಿ ಯೋಚಿಸಿದಾಗಲೆ ಅವನ ಕಣ್ಣಿಗೆ ಎದುರಿಗಿದ್ದ ಪೇಪರಿನಲ್ಲಿ 'ಹೆಚ್ಚು ಬೆಳೆಯಿರಿ' ಎಂಬ ಜಾಹಿರಾತು ಬಿತ್ತು.

"ಹೌದು ಹೆಚ್ಚು ಬೆಳೆಯಿರಿ" ಎಂದು ಅವಡುಗಚ್ಚಿದ. "ಅದೇ ಸರಿ, ಅದೇ ಸರಿ" ಎಂದು ಆರ್ಕಮಿಡೀಸನು 'ಸಿಕ್ಕಿರೋ ಸಿಕ್ಕಿರೋ' ಎಂದು ಕೂಗಿದ ಹಾಗೆ ಕೂಗಿ ಅಲ್ಲಿಂದ ಕಾಲು ತೆಗೆದ.

*   *

ಗಾಡಿ ನಿಂತಿದ್ದು ನ್ಯಾಷನಲ್ ನರ್ಸರಿ ಮುಂದೆ. ಕೆಲವಾರು ಗಿಡಗಳು ಬೇಕಿತ್ತು ನಮ್ಮ ಶಾಲೆ ಕಾಂಪೌಂಡಿನಲ್ಲಿ ಹಾಕಲು. ದೊಡ್ಡ ಬಂಗಲೆ—ದೊಡ್ಡ ಕಾಂಪೌಂಡು ಹೆಸರಾಂತ ಗಿಡಗಳನ್ನು ಮಾರುವ ಸ್ಥಳ ಅದು. ಗಾಡಿ ಇಳಿದು ಆಫೀಸ್ ರೂಮಿನ ಕಡೆ ಹೊರಟೆ. ಬೋರ್ಡಿನಲ್ಲಿ ಡಾ|| ಪ್ರಾಣನ್, M. Sc. (Bot) E.X.C.S.P.E., (Lond.) In ಎಂದು ಬರೆದಿತ್ತು. ಹೋಗಿ ಡಾಕ್ಟರು ಕೊಟ್ಟ ಕುರ್ಚಿಯಲ್ಲಿ ಕೂತೆ. ಟೆನ್ ಎಂದು ಮೇಜಿನ ಮೇಲಿನ ಘಂಟೆ ಬಾರಿಸಿದರು. ಆಳೊಬ್ಬ ಬಂದು ನಿಂತ. ಯಾವುದೋ ಸಹಿ ಹಾಕಿದ ಪತ್ರಗಳನ್ನು ಕೊಟ್ಟರು. ಸ್ಲೈಡ್ ಒಂದನ್ನು ಮೈಕ್ರೊಸ್ಕೊಪ್ ಕೆಳಕ್ಕೆ ಸರಿಸಿ ಅದನ್ನೇ ನೋಡುತ್ತಾ ನಿಂತವರು ನನ್ನ ಮರತಂತೇ ನಟಿಸತೊಡಗಿದರು. ನಾನು ಮೃದುವಾಗಿ ಕೆಮ್ಮಿದೆ...ಆಗ ಡಾಕ್ಟರು ಪಕ್ಕದ ರೂಮಿಗೆ ಬನ್ನಿ ಎಂದು ಕರೆದೊಯ್ದರು.

ಹಾಕಿದ್ದ ಕೂಲಿಂಗ್ ಗ್ಲಾಸು ತೆಗೆದು ಬದಿಯ ಸೋಫಾದ ಮೇಲೆ ಕುಳಿತರು. ನನ್ನನ್ನೂ ಕೂಡುವಂತೆ ಹೇಳಿದರು. ರೂಮಿನಲ್ಲಿ ನಾವಿಬ್ಬರೇ ಇದ್ದೆವು. ಕೊಂಚ ಹೊತ್ತಿನಲ್ಲೇ ದಿವ್ಯಾಲಂಕೃತ ಸುಂದರಿಯೊಬ್ಬಾಕೆ ಚಹದೊಡನೆ ಬಂದು ನಾವಿದ್ದ ರೂಮು ಸೇರಿದಳು. ಚಹ ಹೀರುತ್ತಲೇ ಡಾಕ್ಟರು ಪ್ರಾರಂಭಿಸಿದರು.

"ಗುರ್ತು ಸಿಗಲಿಲ್ಲವೆ?"

"ಇಲ್ಲ...."

ತತ್‌ಕ್ಷಣ ಕೃತಕ ದಾಡಿ ಮೀಸೆ ತೆಗೆದು ನಕ್ಕರು.

"ಪ್ರಾಣೇಶ!" ಎಂದೆ.

ಕಡೆಗ ತನ್ನ ಜೀವನದ ಗುರಿ ಮುಟ್ಟುವುದರಲ್ಲಿ ಯಶಸ್ವಿಯಾಗಿದ್ದ ಪ್ರಾಣೇಶ. ಆ ಸುರಸುಂದರಿ ಮೇಡಂ ಮೀನಾಕ್ಷಿ ಎನ್ನುವುದರಲ್ಲಿ ಸಂಶಯವೇ ಇರಬೇಕಾದ್ದಿಲ್ಲ.

"ಇದೇನಯ್ಯಾ ಭವತಿ ಭಿಕ್ಷಾಂ ಅನ್ನೊ ಸ್ಥಿತೀಲಿದ್ದ ಇಸಮು ಭಾರಿ ಬಂಗಲೆ ಕಟ್ಟಿಸಿಬಿಟ್ಟೆ—ಅದೃಷ್ಟವಂತ...."

ತುಂಬಿದ ಹಣ್ಣಿನ ತಟ್ಟೆಯಿಂದ ಸೇಬು ಕೊಯ್ಯುತ್ತಾ ಹೋಳುಗಳನ್ನು ಮೀನಾಕ್ಷಿ ಮುಂದಿಡುತ್ತಿದ್ದಳು. ಪ್ರಾಣೇಶ ಒಂದೊಂದಾಗಿ ಮುಗಿಸುತ್ತಾ ಪ್ರಾರಂಭಿಸಿದ.

"ಗಾಳಿ ಬಂದಾಗ ತೂರಿಕೋಬೇಕು. ನೀನು ಹೇಳಿದಹಾಗೆ ಭಿಕ್ಷೆ ಬೇಡೋ ಸ್ಥಿತಿಗೆ ಬಂದವನು ನನ್ನ ಮಾರ್ಗ ನಾನೇ ಹುಡುಕಿದೆ. ತಂಗಡಿ ಕಡ್ಡಿ—ಆಡಿನ ಹಿಕ್ಕೆ—ಸಗಣಿ ಉಂಡೆ—ಬೂದಿ ಹುಡಿ—ಕೆಮ್ಮಣ್ಣು ಬಟ್ಟಿ, ಕಂಬಾರ ಕೆಂಚಯ್ಯನ ಎರವು ಇವಿಷ್ಟೇ ನನ್ನ ಈ ಅಂತಸ್ತಿನ ಅರಮನೆಗೆ ಕಾರಣ. ಮತ್ತೆ ಬಹಿರಾಡಂಬರದ ಪೋಷಾಕು—ಪ್ರೊಫೆಸರ್ ಕಳೆಗೆ ಗಡ್ಡ ಮೀಸೆ—ಏನೋ ರಿಸರ್ಚ್ ಅಂತ ತೋರ್‍ಸೋಕೆ ಮೈಕ್ರಸ್ಕೋಪು. ಅಷ್ಟೇ ವಿನಹ—ಮಿಕ್ಕಿದ್ದೆಲ್ಲಾ ಚಾಕಚಕ್ಯತೆ. ಮಾತಿನ ಮುಂಡಿಗೆ ಟೋಪಿಯ ನುಣುಪಿನಲ್ಲಿಡೆಯಾಗಿ ವಾಸ್ತವ ವಿಷಯ ವಿಮರ್ಶಿಸಿದರೆ ಶೂನ್ಯ...." ಎಂದವನೇ ಮತ್ತೆರಡು ಹೋಳು ತಿಂದ.

"ಬಿಡಿಸಿ ಹೇಳು ಮಹಾರಾಯ ..." ಎಂದು ನಾನೂ ಒಂದು ಕಿತ್ತಳೆಹಣ್ಣು ಸುಲಿಯತೊಡಗಿದೆ.

"ಬಿಡಿಸಿ ಹೇಳೋಕೆ ಪುರುಸೊತ್ತು ಎಲ್ಲಿಂದ ತರಲಿ?....ಎಷ್ಟು ಆರ್ಡರು—ಏನುತಾನು ಆದರೂ ಕ್ಲಾರ್ಕುಗಳಿದ್ದಾರೆಂತ ಇಟ್ಕೊ.....ಕೆಲಸ ಸಾಗಿಸಿಕೊಂಡು ಹೋಗ್ತಾರೆ. - ಮುಖ್ಯಾಂಶ ಇಷ್ಟೆ ನೋಡು. ಹೆಚ್ಚು ಬೆಳೆಯಿರಿ—ವನಮಹೋತ್ಸವದ ಹೊತ್ತಿಗೆ ಸರಿಯಾಗಿ ನನ್ನ ನರ್ಸರಿ ತೆಗೆದೆ. ರಂಗುರಂಗಿನ ಪೊಟ್ಟಣ ಮಾಡಿಸಿದೆ—ಒಳಗೆ ಬೀಜಗಳನ್ನು ತುಂಬಿದೆ ಕೆಂಚಯ್ಯನಿಗೆ ಹೇಳಿ ಸಾವಿರ ಕುಂಡ ಮಾಡಿಸಿದೆ—ತಂಗಡಿ—ಹುಣಿಸೆ—ಆಲ—ಹತ್ತಿ ಇತ್ಯಾದಿ ಕೈಗೆ ಸಿಕ್ಕ ಮರದ ರೆಂಬೆ ಕತ್ತರಿಸಿ ಕೆಂಮಣ್ಣು ತುಂಬಿದ ಕುಂಡದಲ್ಲಿ ನೆಟ್ಟೆ. ಬೇವು—ಹರಳಿನ ಗಿಡದ ರೆಂಬೆ ಸೇರಿಸಿ ಕೆಮ್ಮಣ್ಣು ಅರಿವೆ ಕಟ್ಟಿ—ಫೈಕಸ್ ಮಾಗ್ನೊ ಎಲಿಪ್ಸಿಸ್ ಎಂದೆ. ತಂಗಡಿ ರೆಂಬೆಗೆ ಹೇರಳೇ ರೆಂಬೆ ಬಿಗಿದು ಕಸಿಮಾಡಿ ಕ್ಯಾಸಿಯಾ ಕಾಂಪಾರಿಸಸ್ ಎಂದು ನಾಮಕರಣ ಮಾಡಿದೆ. ಕ್ಯಾಸ್ಟರೊ ಹಮಾಟಿಕಾ, ಡಾಂಪಿಯೊಪ್ಸೈಚರ್ಸೈಬು, ಮ್ಯಾಕ್ರೊಪ್ಲೆಕ್ತ್ರಂ ಮೆಡಗಾಸ್ಕರ್‌ನೆಸ್, ಅಂಟಿಕೋಲಿಪಥೇರಿಕಾ—ಇತ್ಯಾದಿ ಇತ್ಯಾದಿ ಒಂದಲ್ಲ ಸಾವಿರ ಹೆಸರಿಟ್ಟು ಪ್ರತಿ ಶಾಲೆ—ಮುನ್ಸಿಪಾಲಿಟಿ—ಖಾಸಗಿ ಸಂಸ್ಥೆಗಳಿಗೆ ಚೀಟಿ ಕಳಿಸಿದೆ. ದೇವರ ದಯೆ ಹೂಳಿದ ಕಡೆ ಚಿಗಿತು—ಬಿತ್ತಕಡೆ ಬೆಳೆತು—ಬೆಳೆದದ್ದು ಬೆಳೆಯೋ ಕೊಳೆಯೋ ಯಾರಿಗೆ ಬೇಕು? ಮುಖ್ಯ ಉತ್ಸವ—ನೆಟ್ಟಗಿಡದ ಪಾತಿ ಸುತ್ತ ಚೆಲ್ಲಿದ ಗೊಬ್ಬರ ನೆಡುವ ವ್ಯಕ್ತಿ ಮುಖ್ಯವೇ ಹೊರತು, ನೆಟ್ಟದ್ದು ಆಲವ್ರೋ, ಅಂಜೂರವ್ರೋ ಅದನ್ನ ಕಟ್ಟಿಕೊಂಡೇನು? ಹುಲ್ಲಿನ ಬೀಜನಾ ಸೂರ್ಯಕಾಂತೀಂತ ಬಿತ್ತಿಸಿದೆ. ದತ್ತೂರಿ ಬೀಜಾನ ಫ್ಲವರೋ ಫ್ಲೋಏಂಯಾ ಎಂದು ಕರೆದೆ. ಮುಖ್ಯ ಹೇಳಿದೆನೇ—ನನ್ನ ಅದೃಷ್ಟ ಜಾತಕದ ಫಲ, ಮೀನಾಕ್ಷಿ ಕಾಲುಗುಣ. ನನ್ನ ನರ್ಸರಿ ಕೀರ್ತಿ ದವಳ ಶಿಖರ ಏರಿತು ಯಥೇಚ್ಛ ಹಣ ತಾನಾಗೆ ಬರತೊಡಗಿತು—

ಬಡತನ ಇಂಗಿಹೋಯಿತು. ಮೀನಾಕ್ಷಿಗೆ ಮಾಲೆ ಹಾಕಿ ಮಹಡಿ ಮನೆ ಸೇರಿದೆ. ಆಟಕ್ಕೆ ತಕ್ಕ ಆಡಂಬರ ಡೊಂಬನಿಗೆ ತಕ್ಕ ಲಾಗ—ಕೇವಲ ಕುಡುಗೋಲು ಕಾಡುಗಿಡಗಳಿರುವತನಕ ನನಗ್ಯಾವ ಭಯವೂ ಕಾಣೆ....ನಿನಗೇನು ಬೇಕಿತ್ತು?....ಯಾವ ಶಾಲೆ?...." ಎಂದು ಕೇಳಿದ. ಮೆಚ್ಚಿದೆನು ಮಗನೆ ನಿನ್ನ ಸಾಹಸಕೆ ಎನ್ನುವಂತಾಯ್ತು ನನಗೆ. ಅಂದೇ ಬಿಟ್ಟೆ. ಇಬ್ಬರೂ ನಕ್ಕರು. ವನಮಹೋತ್ಸವಕ್ಕೆ ನೂರು ಸ್ಯಾಂಕ್ಷನ್ ಆಗಿತ್ತು, ವಿಷಯ ಹೇಳಿದೆ.

"ಹೆದರಬೇಡ—ಒಳ್ಳೇ ಗಿಡಗಳನ್ನು ಕಳಿಸ್ತೀನಿಂತ" ತನ್ನ ಕ್ಯಾಟಲಾಗ್ ತೆಗೆದು ಗುರ್ತುಮಾಡಿ ತನ್ನ ಕ್ಲಾರ್ಕಿಗೆ ಅವನ್ನೆಲ್ಲಾ ನನ್ನ ಶಾಲೆಗೆ ಕಳಿಸುವಂತೆ ಹೇಳಿದ. ಕಡೆಗೆ ಬರ್ತೀನೆ ಬಹಳ ಸಂತೋಷ" ಎಂದು ಬೀಳ್ಕೊಂಡಾಗ "ನಿನ್ನ ಅದೃಷ್ಟ—ಯಾವ ಗಿಡ ಹುಟ್ಟುತ್ತೋ" ಎಂದ ನಗುತ್ತ.

— ದಾಶರಥಿ ದೀಕ್ಷಿತ್.

